ಅಧ್ಯಕ್ಷರು : ಬರೆದುಕೊಡಿ, ನೋಡೋಣ. ಅವರು ಬರೆದುಕೊಡಲಿ, ನಾವು ಅದರ ಕಂಟೆಂಟ್ಸ್ ನೋಡಬೇಕಲ್ಲ ? I must see the contents.

6) ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮಂಡನೆ

ಶ್ರೀ ಡಿ.ಎನ್. ಜೀವರಾಜ್ (ಶೃಂಗೇರಿ) : ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ಪ್ರಸ್ತಾವವನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

"2012ರ ಜನವರಿ 30 ರಂದು ವಿಧಾನ ಮಂಡಲದ ಉಭಯ ಸದನಗಳ ಸದಸ್ಯರನ್ನುದ್ದೇಶಿಸಿ ರಾಜ್ಯಪಾಲರು ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯ ಸದಸ್ಯರಾದ ನಾವು ಘನತೆವೆತ್ತ ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇವೆ."

ಶ್ರೀ ನೆಹರೂ ಓಲೆಕಾರ್ ಚನ್ನಬಸಪ್ಪ (ಹಾವೇರಿ) : ಮಾನ್ಯ ಅಧ್ಯಕ್ಷರೆ, ನಾನು ಪ್ರಸ್ತಾವನೆಯನ್ನು ಅನುಮೋದಿಸುತ್ತೇನೆ.

ಪ್ರಸ್ತಾವನೆಯನ್ನು ಮಂಡಿಸಲಾಯಿತು

7) ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲೆ ಚರ್ಚೆ

ಶ್ರೀ ಡಿ.ಎನ್. ಜೀವರಾಜ್ (ಶೃಂಗೇರಿ) : ಮಾನ್ಯ ಅಧ್ಯಕ್ಷರೆ, ಇವತ್ತು ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮೇಲೆ ಮಾತನಾಡಲು ಅವಕಾಶ ಮಾಡಿಕೊಟ್ಟಿರುವುದಕ್ಕೆ ಮೊದಲನೆಯದಾಗಿ ತಮಗೆ ಧನ್ಯವಾದಗಳನ್ನು ಹೇಳುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಗಮನ ಸೆಳೆಯುವ ಸೂಚನೆಗಳು ಇವೆಯಲ್ಲ ?

ಅಧ್ಯಕ್ಷರು : ಅವರು ಭಾಷಣವನ್ನು ಪ್ರಾರಂಭ ಮಾಡಿ ಬಿಟ್ಟಿದ್ದಾರೆ, ಅವರು ಹೆಚ್ಚು ಹೊತ್ತು ಮಾತನಾಡುವುದಿಲ್ಲ.

ಶ್ರೀ ಡಿ.ಎನ್. ಜೀವರಾಜ್ : ನಾನಾಗಿಯೇ ಎದ್ದುನಿಂತಿಲ್ಲ, ಅಧ್ಯಕ್ಷರು ಕರೆದಿದ್ದಾರೆ. ನಾನು ಮಾತನಾಡಿದ ಮೇಲೆ ನೀವು ಪ್ರಸ್ತಾಪ ಮಾಡಿ.

ಶ್ರೀ ಹೆಚ್.ಡಿ. ರೇವಣ್ಣ : ದಯಮಾಡಿ ವಿರೋಧ ಪಕ್ಷದವರಿಗೆ ಅವಕಾಶ ಕೊಡಿ. ನಿಮ್ಮನ್ನು ನೀವೇ ಹೊಗಳಿಕೊಳ್ಳುವುದಲ್ಲ.

ಶ್ರೀ ಡಿ.ಎನ್. ಜೀವರಾಜ್ : ಇದು ಪದ್ಧತಿ. ಹಿರಿಯ ಸದಸ್ಯರಾದ ರೇವಣ್ಣನವರು ಪದ್ಧತಿಯಂತೆಯೇ ಮಾಡುವ ಹಾಗಿಲ್ಲವೆಂದರೆ ಹೇಗೆ ? ರಾಜ್ಯಪಾಲರಿಗೆ ವಂದನೆ ಹೇಳುವುದು ರೇವಣ್ಣನವರಿಗೆ ಇಷ್ಟವಾಗದಿದ್ದರೆ ನಾವೇನು ಮಾಡುವುದು ?

(ಸನ್ಮಾನ್ಯ ಉಪಾಧ್ಯಕ್ಷರು ಪೀಠವನ್ನಲಂಕರಿಸಿದರು)

ಶ್ರೀ ಡಿ.ಎನ್. ಜೀವರಾಜ್ : ರಾಜ್ಯಪಾಲರು ಬಹಳ ಹಿರಿಯರು, ಕೇಂದ್ರದಲ್ಲಿ ಕಾನೂನು ಮಂತ್ರಿಯಾಗಿದ್ದವರು ಇವತ್ತು ಈ ರಾಜ್ಯದ ರಾಜ್ಯಪಾಲರಾಗಿ ಬಂದ ಮೇಲೆ ಜನವರಿ 30ರಂದು ಕರ್ನಾಟಕ ವಿಧಾನ ಮಂಡಲದ ಸದಸ್ಯರನ್ನು ಉದ್ದೇಶಿಸಿ ಭಾಷಣ ಮಾಡಿದ್ದಾರೆ. ಆ ಭಾಷಣ ಮಾಡಬೇಕಾದರೆ ಕರ್ನಾಟಕ ಸರ್ಕಾರ ನಡೆದು ಬಂದಂಥ ರೀತಿ ಮತ್ತು ಅದೆಷ್ಟು ಒಳ್ಳೆಯ ಕಾರ್ಯಕ್ರಮಗಳನ್ನು ಮಾಡಿದೆ ಎನ್ನುವಂಥದ್ದನ್ನು ಅತ್ಯಂತ ಮುಕ್ತ ಮನಸ್ಸಿನಿಂದ ಮತ್ತು ಒಳ್ಳೆಯ ಮನಸ್ಸಿನಿಂದ ಹೇಳಿದ್ದಾರೆ. ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಬೇರೆ ಯಾರೇ ಹೇಳಿದ್ದರೂ ಅದಕ್ಕೊಂದು ವಿಶೇಷತೆ ಬರುತ್ತಿರಲಿಲ್ಲ. ಮಾನ್ಯ ಕರ್ನಾಟಕದ ರಾಜ್ಯಪಾಲರು ಈ ರಾಜ್ಯಕ್ಕೆ ಬಂದ ಮೇಲೆ ಎಲ್ಲಾ ವಿಷಯಗಳನ್ನೂ X ray ಕಣ್ಣಿನಿಂದಲೇ ನೋಡಿ ನೋಡಿ ತೀರ್ಮಾನ ಮಾಡಿ ನಮಗೆ ಮಾರ್ಗದರ್ಶನವನ್ನು ಒಳ್ಳೆಯ ರೀತಿಯಲ್ಲಿ ಮಾಡಿರುವಂಥ ರಾಜ್ಯಪಾಲರು ಕರ್ನಾಟಕ ಸರ್ಕಾರದ ಬಗ್ಗೆ ಬಹಳ ಒಳ್ಳೆಯ ಪದಗಳನ್ನು ಹೇಳಿದ್ದಾರೆಂದರೆ ನಮ್ಮನ್ನು ಯಾವಾಗಲೂ ಹೊಗಳುವಂತಹವರು ಹೇಳಿದರೆ ಅದೊಂದು ವಿಶೇಷತೆ ಅಲ್ಲ, ನಮ್ಮನ್ನು ಎಲ್ಲಾ ಕಾಲದಲ್ಲಿ X ray ಕಣ್ಣಿನಲ್ಲಿ ಮತ್ತು ಚಿಕಿತ್ಸಕ ರೀತಿಯಲ್ಲಿ ನೋಡಿದ್ದಾರೆ. ಆ ರೀತಿ ನೋಡಿರುವಂಥ ಒಬ್ಬ ರಾಜ್ಯಪಾಲರು ನಮ್ಮನ್ನು ಇಷ್ಟು ಒಳ್ಳೆಯ ಪದಗಳಿಂದ ಹೇಳಿದ್ದಾರೆ ಎನ್ನುವುದು ನನಗೆ ಅತ್ಯಂತ ಸಂತೋಷ, ಸಂಭ್ರಮ, ಹೆಮ್ಮೆ ಎಂದು ಅನಿಸಿದೆ. ಅಂಥ ಹಿರಿಯರು ರಾಜ್ಯ ಸರ್ಕಾರಕ್ಕೆ ಕೊಟ್ಟಿರುವ certificate ಏನಿದೆ, ಅದೂ ಅಷ್ಟೊಂದು ಗೌರವಯುತವಾದ ಪದಗಳಿಂದ ಹೇಳಿದ್ದಾರೆ. ನಾನು ಅತ್ಯಂತ ಪವಿತ್ರ ಕ್ಷೇತ್ರವಾದ ಶೃಂಗೇರಿಯಿಂದ ಶಾಸಕನಾಗಿ ಬಂದಿದ್ದು, ಮೊದಲನೆಯಾದಾಗಿ ರಾಜ್ಯಪಾಲರಿಗೆ ವಂದನೆಯನ್ನು ಸಲ್ಲಿಸುತ್ತೇನೆ. ರಾಜ್ಯಪಾಲರ

ಭಾಷಣದಲ್ಲಿ ಅವರು ಎಷ್ಟು ಒಳ್ಳೆಯ ಪದಗಳನ್ನು ಉಪಯೋಗಿಸಿದ್ದಾರೆಂಬುದನ್ನು ಗಮನಿಸಬಹುದು. "ಅತ್ಯಂತ ಫಲಪ್ರದವಾದ, ದಕ್ಷ ಆಡಳಿತವನ್ನು ಕಳೆದ ಮೂರುವರೆ ವರ್ಷಗಳಿಂದ ಅವಿರತವಾಗಿ ಶ್ರಮಿಸುತ್ತಾ ಕೊಡುತ್ತಾ ಬಂದಿದ್ದಾರೆ" ಎಂದು ಹೇಳುತ್ತಾರೆ. ಅಂದರೆ, ಇದು ಬಹಳ ಸಂತೋಷ ತರುವಂಥ ಸಂಗತಿಯಾಗಿದೆ. ರಾಜ್ಯಪಾಲರು ಕರ್ನಾಟಕ ಸರ್ಕಾರಕ್ಕೆ ಕೊಟ್ಟಿರುವ certificate ಇದೆಂದು ನಾನಾದರೂ ಭಾವಿಸುತ್ತೇನೆ. ಮಾನ್ಯ ರಾಜ್ಯಪಾಲರು, "ರಾಜಕೀಯದಲ್ಲಿ ನಾಯಕತ್ವ ಬದಲಾವಣೆಯಾಗಿದ್ದರೂ ಈ ಸರ್ಕಾರವು ಪೂರ್ಣ ಕಾರ್ಯಕ್ರಮವನ್ನು ಬೆಂಬಿಡದೆ ಮುಂದುವರಿಸುತ್ತಿದೆ ಮತ್ತು ಸುಗಮ ಪರಿವರ್ತನೆ ಮತ್ತು ನಿರಂತರತೆ ಖಾತರಿಪರಿಸುತ್ತದೆ" ಎಂದು ಹೇಳಿದ್ದಾರೆ. ಅಂದರೆ, ನಾಯಕತ್ವ ಬದಲಾದರೂ ರಾಜ್ಯದ ಕಾಮಗಾರಿಗಳ ಮೇಲೆ ಯಾವುದೇ ಪರಿಣಾಮ ಬೀರಲಿಲ್ಲವೆನ್ನುವುದನ್ನು ಅವರು ಒತ್ತು ಕೊಟ್ಟು ಹೇಳಿದ್ದಾರೆ. ಇದನ್ನು ಅವರು ಹೇಳಿದಾಗ ನಾನಂತೂ ಭಾವಿಸುತ್ತೇನೆ, ಅವರ ಅನುಭವದ ಆಧಾರದ ಮೇಲೆ ಹಿಂದೆ ಈ ರಾಜ್ಯದಲ್ಲಿ 5 ವರ್ಷಗಳಲ್ಲಿ 3–3 ಮುಖ್ಯಮಂತ್ರಿಗಳು ಬದಲಾಗಿರುವುದನ್ನು ನಾವು ಕಂಡಿದ್ದೇವೆ. ಆ ಸಂದರ್ಭಗಳಲ್ಲಿ ಹಿಂದಿನ ಮುಖ್ಯಮಂತ್ರಿಗಳು ಕೊಟ್ಟಿರುವ ಜನಪರ ಕಾರ್ಯಕ್ರಮಗಳು, ಒಳ್ಳೆಯ, ನಿರಂತರ ಕಾರ್ಯಕ್ರಮಗಳು ಇವೆಲ್ಲವೂ ನಿಂತು ಹೋಗಿರುವಂಥದ್ದು ಮತ್ತು ಬದಲಾಗಿರುವುದನ್ನು ನೋಡಿದ್ದೇವೆ. ಆದರೆ, ಇಲ್ಲಿ ಮುಖ್ಯಮಂತ್ರಿಯವರು ಬದಲಾದರೂ ಕಾರ್ಯಕ್ರಮಗಳು ಬದಲಾಗಲಿಲ್ಲ. ನಮ್ಮ ಸನ್ಮಾನ್ಯ ಯಡಿಯೂರಪ್ಪನವರ ಜನಪರ ಕಾರ್ಯಕ್ರಮಗಳನ್ನು ಯಥಾಸ್ಥಿತಿಯಲ್ಲಿ ಮುಖ್ಯಮಂತ್ರಿಯವರಾದ ಸನ್ಮಾನ್ಯ ಸದಾನಂದಗೌಡರವರ ಸರ್ಕಾರ ಮುಂದುವರಿಸಿಕೊಂಡು ಬರುತ್ತಿರುವುದನ್ನು ರಾಜ್ಯಪಾಲರು ಪ್ರಶಂಸೆ ಮಾಡಿ ಹೇಳಿದ್ದಾರೆ. ಇದನ್ನು ಹೇಳುವುದಕ್ಕೆ ನನಗೆ ಬಹಳ ಸಂತೋಷವೆನಿಸುತ್ತದೆ. ಈ ರಾಜ್ಯದೊಳಗೆ ಏನು ಕಾರ್ಯಕ್ರಮಗಳನ್ನು ಮಾಡಿದ್ದಾರೆ ಎಂದು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಏನು ಹೇಳಿದ್ದಾರೆ, ಇವಿಷ್ಟೇ ನಮ್ಮ ಕಾರ್ಯಕ್ರಮಗಳಲ್ಲ. ನಮ್ಮ ಕಾರ್ಯಕ್ರಮಗಳನ್ನೇನಾದರೂ ಪಟ್ಟಿ ಮಾಡಿ, ಅಂಕಿಅಂಶಗಳ ಸಹಿತ ಈ ರಾಜ್ಯದ ಜನರ ಮುಂದಿಡುವುದನ್ನು ರಾಜ್ಯಪಾಲರು ಏನಾದರೂ ಮಾಡಿದ್ದರೆ ದೊಡ್ಡ ಪುಸ್ತಕವನ್ನೇ ಕೊಡಬೇಕಾಗುತ್ತಿತ್ತು. ಅಷ್ಟು ಒಳ್ಳೆಯ ಕಾರ್ಯಕ್ರಮಗಳನ್ನು ಈ ರಾಜ್ಯದೊಳಗಡೆ ಜಾರಿ ಮಾಡಿರುವುದು ನನಗಂತೂ ಸಂತೋಷ ತಂದಿದೆ. ಒಳ್ಳೆಯ ಕಾರ್ಯಕ್ರಮಗಳನ್ನು ನಮ್ಮ

ಕರ್ನಾಟಕ ಸರ್ಕಾರ ಜಾರಿ ಮಾಡಿದೆ. ಆದರೆ, ಇದನ್ನು ಮಾಡಿದೆ ಎಂದು ಹೇಳಿದ ಕೂಡಲೇ ಈ ರಾಜ್ಯದ ಎಲ್ಲಾ ಕಾರ್ಯಕ್ರಮಗಳೂ ಮುಗಿದು ಹೋಗಿವೆಯೇ ? ಇನ್ನು ಮುಂದೆ ಯಾವುದೇ ಕಾರ್ಯಕ್ರಮಗಳು ಇಲ್ಲವೇ ? ನನಗೆ ಆ ತರಹದ ಹುಂಬತನವೂ ಇಲ್ಲ, ಆ ತರಹದ ಸೊಕ್ಕೂ ಇಲ್ಲ. ರಾಜ್ಯಪಾಲರು ಹೇಳಿರುವುದು ಮತ್ತು ನಮ್ಮೆ ರಾಜ್ಯ ಸರ್ಕಾರದವರು ಬಹಳಷ್ಟು ಒಳ್ಳೆಯ ಕಾರ್ಯಕ್ರಮ ಮಾಡಿದ್ದೇವೆ. ಆದರೆ, ಇನ್ನಷ್ಟು ಕಾರ್ಯಕ್ರಮಗಳನ್ನು ಮಾಡುವುದೂ ಇದೆ. ಆ ರೀತಿ ಮಾಡುವುದಿದೆ ಎನ್ನುವುದನ್ನು ಮಾನ್ಯ ಸದಸ್ಯರುಗಳು X ray ಕಣ್ಣಿನಿಂದ ನೋಡಿ ನಾಳೆಯಿಂದ ಹೇಳುತ್ತಾರೆ. ಆದರೆ, ಒಳ್ಳೆಯದೇನಾಗಿದೆ ಮತ್ತು ಒಳ್ಳೆಯದು ಏನಾಗಬೇಕಾಗಿದೆ ಎಂಬುದನ್ನು ಹೇಳುವುದು ನಮ್ಮ ಕರ್ತವ್ಯ ಕೂಡ ಆಗಿದೆ. ರಾಜ್ಯಪಾಲರ ಭಾಷಣದಲ್ಲಿ ಒಂದೇ ವರ್ಷದಲ್ಲಿ ನಾವು ಎಲ್ಲವನ್ನೂ ಮಾಡಿ ಮುಗಿಸುತ್ತೇವೆ ಎಂದು ಹೇಳುವುದಕ್ಕಾಗಿಲ್ಲವೆನ್ನುವುದನ್ನೂ ನಾನು ಹೇಳಿದ್ದೇವೆ. ಈ ರಾಜ್ಯದೊಳಗೆ ರೈತರಿಗಾಗಿ ಮಾಡಿರುವಂಥ ಕಾರ್ಯಕ್ರಮಗಳು ಬಹುಶಃ ಈ ದೇಶದೊಳಗಡೆ ಯಾರೂ ಮಾಡಲಿಕ್ಕಾಗದಿರುವಷ್ಟು ಜನಪರ ಕಾರ್ಯಕ್ರಮಗಳನ್ನು ರೈತರಿಗಾಗಿ ಕೊಟ್ಟಿದ್ದೇವೆ. ಈ ರಾಜ್ಯದ ಒಟ್ಟು ಆಹಾರೋತ್ಪಾದನೆ ದಾಖಲೆಯ ಪ್ರಮಾಣ ಅಂದರೆ 132 ದಶಲಕ್ಷ ಟನ್‌ನಷ್ಟು ಕಳೆದ ವರ್ಷ ಉತ್ಪಾದನೆ ಮಾಡಿರುವುದನ್ನು ನಾವು ನೋಡಿದ್ದೇವೆ. ಆದರೆ, ಈ ವರ್ಷ ಬರಗಾಲದ ಸ್ಥಿತಿಯಲ್ಲಿ ಸ್ವಲ್ಪ ವ್ಯತ್ಯಾಸವಾಗಬಹುದು. ಸ್ವಲ್ಪ ಮಟ್ಟಿನ ಹಿಂಜರಿತ ಕಂಡು ಬರಬಹುದು. ಆದರೂ ನಾವೇನೂ ಬಹಳ ಹಿಂದಕ್ಕೆ ಹೋಗುತ್ತೇವೆನ್ನುವುದು ಇಲ್ಲ ಎನ್ನುವುದು ಸಂತೋಷದ ವಿಷಯವೆಂದು ನಮ್ಮ ಕೃಷಿ ಮಂತ್ರಿಯವರು ಯಾವಾಗಲೂ ಹೇಳುತ್ತಿರುತ್ತಾರೆ. ನಾವು ಇಂಥ ಕೆಟ್ಟ ಸ್ಥಿತಿಯಲ್ಲೂ 99 ತಾಲ್ಲೂಕುಗಳಲ್ಲಿ ಬರ ಬಂದಾಗಲೂ ಈ ರಾಜ್ಯದೊಳಗಡೆ ಬರವನ್ನು ಸಮರ್ಪಕವಾಗಿ ನಿರ್ವಹಣೆ ಮಾಡಲಿಕ್ಕೆ ಸಾಧ್ಯವಾಗುವಂಥದ್ದು ಕರ್ನಾಟಕ ಸರ್ಕಾರದ ಕೈಯಲ್ಲಾಗಿದೆ. ಯಾರಾದರೂ ಬಂದು ನಮ್ಮ ಜಿಲ್ಲೆ, ತಾಲ್ಲೂಕನ್ನು ಬರ ಎಂದು declare ಮಾಡಿದ್ದೀರಾ ಎಂದು ಕೇಳುವುದಕ್ಕಿಂತ ಮುಂಚೆಯೇ ಕರ್ನಾಟಕ ಸರ್ಕಾರ 99 ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳೆಂದು ತೀರ್ಮಾನ ಮಾಡಿದೆ. ಈ ದೇಶದೊಳಗಡೆ ಯಾವುದೇ ಒಂದು ಸರ್ಕಾರ ಮೂರು ಪರ್ಸೆಂಟ್‌ನಲ್ಲಿ ರೈತರಿಗೆ ಸಾಲ ಕೊಡಲಿಲ್ಲ. ಆ ರೀತಿ ಸಾಲ ಕೊಟ್ಟ ಸರ್ಕಾರ ಯಾವುದಾದರೂ ಇದ್ದರೆ ಅದು ನಮ್ಮ ಮಾಜಿ ಮುಖ್ಯಮಂತ್ರಿಯವರಾದ

ಯಡಿಯೂರಪ್ಪನವರ ಕಲ್ಪನೆಯ ಕಾರ್ಯಕ್ರಮವಾಗಿತ್ತು. ಅದನ್ನು ಈಗ ಹಾಲಿ ಮುಖ್ಯಮಂತ್ರಿಯವರಾದ ಮಾನ್ಯ ಸದಾನಂದಗೌಡರವರೂ ಮುಂದುವರಿಸುತ್ತಿದ್ದಾರೆ. 3% ಬಡ್ಡಿದರದಲ್ಲಿ ಸಾಲ ಕೊಡುವುದು ಏನು ಜಾರಿಗೆ ಬಂತು, ಆ 3% ಸರಿಯಲ್ಲವೆನ್ನುವ ಕಾರಣ್ಯಕಾಗಿ 1% ಬಡ್ಡಿದರದಲ್ಲಿ ಸಾಲ ಕೊಡುವುದು ಜಾರಿಗೆ ಬಂತು. 1% ಬಡ್ಡಿದರದಲ್ಲಿ ಸಾಲ ಕೊಡುವ ಯೋಜನೆಯನ್ನು ಈ ದೇಶದಲ್ಲಿ ಯಾವುದಾದರೂ ಸರ್ಕಾರ ಮಾಡಿದ್ದರೆ ಅದು ನಮ್ಮ ಸರ್ಕಾರ ಮಾತ್ರ ಮತ್ತು ಅದು ಕರ್ನಾಟಕ ಸರ್ಕಾರ ಮಾತ್ರ ಎನ್ನುವಂಥ ಸಂಭ್ರಮ ನಮಗೆಲ್ಲರಿಗೂ ಇದೆ. ಇವತ್ತು ರೈತರಿಗಾಗಿ ಕರ್ನಾಟಕ ಸರ್ಕಾರ ಎಷ್ಟಷ್ಟು ಯೋಜನೆಗಳನ್ನು ಕೊಟ್ಟಿದೆ ಎಂದು ಕೆಲವರು ಹೇಳುವುದನ್ನು ನಾನು ಕೇಳಿದ್ದೇನೆ. ಎಲ್ಲೋ ಒಂದು ಕಡೆ ಮೊನ್ನೆ ಹಾಲಿನ ಬೆಲೆ ಏರಿತು ಎಂದ ಕೂಡಲೇ ನಗರ ಪ್ರದೇಶವನ್ನು ಇಲ್ಲವೇ ಯಾರೋ ಕೊಳ್ಳುವವರನ್ನು ಮಾತ್ರ ಯೋಚನೆ ಮಾಡಿ ಒಂದು ತೀರ್ಮಾನವನ್ನು ಹೇಳಿಬಿಡುತ್ತಾರೆ. ಒಂದು ಲೀಟರ್ ಹಾಲಿಗೆ 2 ರೂಪಾಯಿ ಹೆಚ್ಚಿಗೆ ಆಯಿತಲ್ಲಾ ಎಂದು ಹೇಳುತ್ತಾರೆ. ಆ 2 ರೂಪಾಯಿ ಏರಿದರೆ ಅದು ಹಳ್ಳಿಯಲ್ಲಿರುವಂಥ ಬೆಳಗ್ಗೆಯಿಂದ ಸಂಜೆವರೆಗೆ ಹಾಲು ಕರೆದ ಆ ತಾಯಿಗೆ ಅದನ್ನು ಕೊಟ್ಟಿದೆ. ಹಿಂಡಿ, ಹುಲ್ಲಿನ ಬೆಲೆ ಎಷ್ಟಿದೆ ಮತ್ತು ದನ ಸಾಕಲಿಕ್ಕೆ ಎಷ್ಟು ಕಷ್ಟವಿದೆ ಎಂಬುದು ಗೊತ್ತಿರುವಂಥ ಯಾರೂ ಸಹ ಈ ಪ್ರಸ್ತಾವನೆಯನ್ನು ಎಲ್ಲೂ ಹೇಳಲಿಕ್ಕೆ ಸಾಧ್ಯವಿಲ್ಲ. ಹಾಲಿನ ಬೆಲೆ 2 ರೂಪಾಯಿ ಏರಿದೆ ಎಂದಾದರೆ, ಬೇರೆ ರಾಜ್ಯಗಳ ಹಾಲಿನ ದರಕ್ಕೆ ಹೋಲಿಕೆ ಮಾಡಿ ಹೇಳುವುದಾದರೆ ನಮ್ಮ ರಾಜ್ಯದ ಹಾಲಿನ ಬೆಲೆ ಕಡಿಮೆ ಇದೆ.

ಶ್ರೀ ಕೆ. ಪಿ. ಬಚ್ಚೇಗೌಡ: ಒಂದು ಲೀಟರ್ ಹಾಲಿಗೆ 3 ರೂಪಾಯಿ ಏರಿಸಿದ್ದಾರೆ. ಎರಡು ರೂಪಾಯಿಗಳಲ್ಲ.

ಶ್ರೀ ಡಿ. ಎನ್. ಜೀವರಾಜ್: 3 ರೂಪಾಯಿ ಏರಿಸಿದರೂ ಅದನ್ನು ರೈತರಿಗೇ ಕೊಡುತ್ತಾರೆ. ಇವತ್ತು ಮೂರು ರೂಪಾಯಿ ಏರಿಸಿ ಅದರಲ್ಲಿ 2 ರೂಪಾಯಿಗಳನ್ನು ರೈತರಿಗೆ ಕೊಟ್ಟಿದ್ದಲ್ಲ. ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದ ಅಂದಿನ ದಿನದಲ್ಲಿ ಮೊದಲ ಬಾರಿ ಹಾಲು ಕರೆದು ಕೊಟ್ಟ ಆ ತಾಯಿಗೇ ಆ 2 ರೂಪಾಯಿಗಳನ್ನು ಕೊಡಬೇಕೆನ್ನುವಂಥ ಒಂದು ಹೊಸ ಕಲ್ಪನೆ ಜಾರಿಗೆ ಬಂತು. ಹಾಲು ಕರೆಯುವುದು ಆ ತಾಯಿ, ಹಣ ತೆಗೆದುಕೊಳ್ಳುವವನು ಮನೆಯ ಯಜಮಾನ, ಇದಾಗಬಾರದು. ಆ ತಾಯಿಗೆ

ಆ 2 ರೂಪಾಯಿ ಸಿಗಬೇಕೆನ್ನುವುದಕ್ಕಾಗಿ ಆ 2 ರೂಪಾಯಿಗಳನ್ನು ತಾಯಿಗೇ ಕೊಡುತ್ತೇವೆನ್ನುವ ಯೋಜನೆಯನ್ನೇನಾದರೂ ಜಾರಿಗೆ ತಂದಿದ್ದರೆ ಅದು ನಮ್ಮ ಸರ್ಕಾರ ಮಾತ್ರ.

(ಗೊಂದಲ)

ಶ್ರೀ ಡಿ. ಎನ್. ಜೀವರಾಜ್: ಹಿಂದ ಜೆ. ಹೆಚ್. ಪಟೇಲ್‌ರವರು ಈ ಸದನದಲ್ಲಿ ಮತನಾಡುತ್ತಾ x ray ಕಣ್ಣಿನಲ್ಲಿ ಯಾವುದನ್ನೂ ನೋಡಬೇಡಿ, ಸ್ವಲ್ಪ ಬರಿಗಣ್ಣಿನಲ್ಲಿ ನೋಡಿ, ಆಗ ಸುಂದರತೆ ಮತ್ತು ಸೌಂದರ್ಯತೆ ಕಾಣುತ್ತದೆಂದು ಹೇಳಿದ್ದರಂತೆ.

ಶ್ರೀ ಕೆ. ಪಿ. ಬಚ್ಚೇಗೌಡ: ತಪ್ಪೆಂದು ಹೇಳಲಿಲ್ಲ. 6 ತಿಂಗಳಿನಿಂದ ಆ ತಾಯಿಯಂದರಿಗೆ ಆ ಹಣವೇ ಬಂದಿಲ್ಲವೆನ್ನುವುದನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಟೀಕೆ ಮಾಡುತ್ತಿಲ್ಲ.

ಶ್ರೀ ಡಿ. ಎನ್. ಜೀವರಾಜ್: 7 ತಿಂಗಳಿನದ್ದನ್ನೂ ಸೇರಿಸಿ ಸರ್ಕಾರ ಕೊಡುತ್ತದೆ ಬಿಡಿ. ನೀವೂ ಸಹ ನಾಳೆ ಮಾತನಾಡುವಾಗ ನಿಮ್ಮ ಸಲಹೆ ಹೇಳಿ. ನಾವು ಆ ತಾಯಿಗೆ 2 ರೂಪಾಯಿಗಳನ್ನು ಕೊಟ್ಟಿದ್ದೇವೆನ್ನುವುದನ್ನು ಕೇಳಿ ಮಾನ್ಯ ವಿರೋಧ ಪಕ್ಷದ ಸದಸ್ಯರಿಗೆ ಸುಧಾರಿಸಿಕೊಳ್ಳುವುದಕ್ಕೆ ಆಗುತ್ತಿಲ್ಲ. ನಾವು ಹಾಲು ಕರೆಯುವ ತಾಯಂದಿರಿಗೆ ಹಣಕೊಡುತ್ತಿದ್ದೇವೆನ್ನುವುದನ್ನು ಅವರು ಸಹಿಸಿಕೊಳ್ಳುತ್ತಿಲ್ಲ. ನಿಮಗೆ ಆ ದುಃಖ ಬೇಡ.

(ಗೊಂದಲ)

ಶ್ರೀ ಎಂ. ಟಿ. ಕೃಷ್ಣಪ್ಪ: ಜೀವರಾಜ್‌ರವರೆ, it is not your proposal ದಯಮಾಡಿ, ಅರ್ಥ ಮಾಡಿಕೊಳ್ಳಿ, ಇದು ನಿಮ್ಮ ಸರ್ಕಾರದ ಪ್ರಪೋಸಲ್ ಅಲ್ಲ. ಕಳೆದ ಬಾರಿ ಕೊಟ್ಟಿದ್ದನ್ನು ನಿಮ್ಮ ಯಡಿಯೂರಪ್ಪನವರು, Co-operative Minister reject ಮಾಡಿ ವಾಪಸ್ ಕಳುಹಿಸಿರುವುದನ್ನು ದಯಮಾಡಿ ಅರ್ಥ ಮಾಡಿಕೊಳ್ಳಿ.

ಶ್ರೀ ಎಂ. ಟಿ. ಕೃಷ್ಣಪ್ಪ: you kindly go through the file

ಶ್ರೀ ಡಿ. ಎನ್. ಜೀವರಾಜ್: ಒಂದಂತು ಸತ್ಯ ಯಾವಾಗಲೂ ಸೌಂದರ್ಯತನವನ್ನು ಬರಿಗಣ್ಣಿನಲ್ಲಿ ನೋಡಬೇಕು. X-RAY ಯಿಂದ ನೋಡಿದರೆ ಬರೀ ಮೂಳೆಗಳು ಕಾಣಿಸುತ್ತವೆ. ಹಾಗೆಯೇ ನೋಡಿದರೆ ಮಾತ್ರ ಚೆಂದ ಇರುವವರು ಚೆಂದವಾಗಿ ಕಾಣುತ್ತಾರೆ. ಹಾಗೆಯೇ ನೋಡುವುದನ್ನು ಸ್ವಲ್ಪ ಅಭ್ಯಾಸ ಮಾಡಿಕೊಳ್ಳಿ. ಹಾಗೆಯೇ ನೋಡುವುದಾದರೆ ನಮ್ಮ

ಸರ್ಕಾರ ತುಂಬಾ ಚೆನ್ನಾಗಿ ಕಾಣುತ್ತದೆ. ದಯವಿಟ್ಟು X-RAY ಕಣ್ಣಿನಲ್ಲಿ ನೋಡಬೇಡಿ, ಬರಿಗಣ್ಣಿನಲ್ಲಿ ನೋಡಬಹುದು. 2 ರೂಪಾಯಿಗಳನ್ನು ಒಬ್ಬ ತಾಯಿಗೆ, ಮನೆಗೆ ಕೊಡಬೇಕೆನ್ನುವ ಆಲೋಚನೆ ಹೊಳೆದಿರುವುದು ಈ ದೇಶದಲ್ಲಿ ಯಾರಿಗೂ ಇಲ್ಲ. ಈ ದೇಶದ ಒಳಗಡೆ ನಮ್ಮ ಸರ್ಕಾರವೇ ವಿಭಿನ್ನ ಸರ್ಕಾರ ಮತ್ತು ಜನಪರವಾದ ಸರ್ಕಾರ.

ಶ್ರೀ ಅಮರೇಶ್: S. M. Krishna ರವರ ಕಾಲದಲ್ಲಿ ಮಕ್ಕಳಿಗೆ ಕೊಡುತ್ತಿರುವ ಊಟದ ಬಗ್ಗೆ ಹೇಳಿ.

ಶ್ರೀ ಡಿ. ಎನ್. ಜೀವರಾಜ್: ಆ ಬಗ್ಗೆ ನಿಮ್ಮ ಭಾಷಣದಲ್ಲಿ ಹೇಳಿ, ಎಸ್. ಎಂ. ಕೃಷ್ಣ ರವರು 2002ರಲ್ಲಿ ಏನೇನು ಕೊಟ್ಟಿದ್ದರು ಎಂಬುದನ್ನು ನನ್ನ ಬಾಯಲ್ಲಿ ಏಕೆ ಹೇಳಿಸುತ್ತೀರಿ? ಆವತ್ತು ರೈತರುಗಳಿಗೆ 2 ರೂಪಾಯಿಗಳನ್ನು ಕೊಟ್ಟಿದ್ದೇವೆ. ಮತ್ತೆ 3 ರೂಪಾಯಿ ಈಗ addition ಆಗುತ್ತಿದೆ. ಒಂದು ಮನೆಯಲ್ಲಿರುವ ತಾಯಿ 10 ಲೀಟರ್ ಹಾಲು ಸರಬರಾಜು ಮಾಡಿದರೆ ಅವರಿಗೆ ದಿನಕ್ಕೆ 20 ರೂಪಾಯಿ ಸಿಗುತ್ತದೆ. ಅಂದರೆ ತಿಂಗಳಿಗೆ 600 ರೂಪಾಯಿ ಆಯಿತು. ಆದರಿಂದ, ಆ ಮನೆಯಲ್ಲಿರುವ ಮಕ್ಕಳ ಫೀ ಕಟ್ಟುವುದಕ್ಕೆ ಸಹಾಯವಾಗುತ್ತದೆ. ಇದು ಬಹಳ ಜನಪರ ಕಾರ್ಯಕ್ರಮವಾಗಿದೆ. ಇಂಥ ಜನಪರ ಕಾರ್ಯಕ್ರಮವನ್ನು ತರುವಂಥ ಮನಸ್ಥಿತಿ ಬಂದದ್ದು ನಮ್ಮ ನಾಯಕರಿಗೆ ಮಾತ್ರ. ಅದನ್ನು ಬೇರೆ ಯಾರೂ ಮಾಡಲಿಲ್ಲ. ಹಿಂದಿನವರು ಏನೂ ಮಾಡಲಿಲ್ಲೆವೆಂದು ನಾನು ಹೇಳುವುದಿಲ್ಲ. ಆವತ್ತು ಅವರು ಮಾಡಿರುವುದು ಒಳ್ಳೆಯದಿರಬಹುದು. ಆದರೆ, ಇವತ್ತು ನಾವೇನು ಮಾಡಿದ್ದೇವೆ. ಎನ್ನುವುದನ್ನು ಮಾತ್ರ ನಾನು ಹೇಳುತ್ತಿದ್ದೇನೆ. ಸಾವಯವ ಕೃಷಿ ಎಂದು ನೆನಪು ಆದಕೂಡಲೆ ಮಾನ್ಯ ಶಾಸಕರಾದ ಸಿದ್ಧರಾಜುರವರ ನೆನಪಾಗುತ್ತದೆ. ಇಡೀ ಸದನ ಹಾವೇರಿ ಗೋಲಿಬಾರ ಘಟನ ಬಗ್ಗೆ ಚರ್ಚೆ ಮಾಡುತ್ತಿತ್ತು. ಆ ಸಮಯದಲ್ಲಿ ಗೋಲಿಬಾರ್ ಆದ ಬಗ್ಗೆ ಮತ್ತು ಗೊಬ್ಬರ ಕೊಡಲಿಲ್ಲವೆನ್ನುವ ಬಗ್ಗೆಯೇ ಮಾತನಾಡುತ್ತಿದ್ದರು. ಎಲ್ಲಾ ಮುಗಿದಾದ ಮೇಲೆ ಕೊನೆಯಲ್ಲಿ ಸಿದ್ದರಾಜುರವರು ಎದ್ದು ನಿಂತು ನಾನು ಮಾತನಾಡಬೇಕೆಂದು ಹೇಳಿದರು. ಅವರು ಸರ್ಕಾರವನ್ನು ಬಯ್ಯುತ್ತಾರೆಂದು ನಾವು ಭಾವಿಸಿದ್ದೆವು. ಆದರೆ, ಅವರು ಎದ್ದು ನಿಂತು ಮಾನ್ಯ ಮುಖ್ಯಮಂತ್ರಿಯವರಿಗೆ ಭೂಮಿಗೆ ವಿಷ ಹಾಕುತ್ತಿರುವುದನ್ನು ನಿಲ್ಲಿಸಿ ಎಂದು ಸಲಹೆ ಕೊಟ್ಟರು. ಗೊಬ್ಬರ ಇಲ್ಲವೆಂದು ದೊಡ್ಡ

ಸುದ್ದಿ ಮಾಡಬೇಡಿ. ಸಾವಯವ ಕೃಷಿಗೆ ಹೆಚ್ಚು ಒತ್ತು ಕೊಡಿ. ನಿಮ್ಮ ಕಾಲದಲ್ಲಾದರೂ ಸಾವಯವ ಕೃಷಿಗೆ ಅವಕಾಶ ಬರಲಿ ಎನ್ನುವ ವಿಷಯವನ್ನು ಹೇಳಿದರು. ನನಗೆ ಇನ್ನೂ ನೆನಪಿದೆ. ಅದರ ನಂತರ ನಮ್ಮ ಮಾಜಿ ಮುಖ್ಯಮಂತ್ರಿಯಾದ ಯಡಿಯೂರಪ್ಪನವರು ಮತ್ತು ಹಾಲಿ ಮುಖ್ಯಮಂತ್ರಿಗಳಾದ ಸದಾನಂದಗೌಡರು ಸಾವಯವ ಕೃಷಿಕನ ಮನೆಯಲ್ಲಿ ಉಳಿಯುವ ಕಾರ್ಯಕ್ರಮ ಮಾಡಿ ಸಾವಯವ ಕೃಷಿಗೆ ದೊಡ್ಡ ಪ್ರಚಾರ ಸಿಗಬೇಕು ಮತ್ತು ರೈತರಿಗೆ ಇದರಿಂದ ಲಾಭವಾಗಬೇಕೆನ್ನುವ ಪ್ರಯತ್ನವನ್ನು ಮಾಡಿದರು. ಅಂದು ಇಡೀ ವಿರೋಧ ಪಕ್ಷ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡ ಸಂದರ್ಭದಲ್ಲಿ ವಿರೋಧ ಪಕ್ಷದ ಸದಸ್ಯರಾದ ಸಿದ್ದರಾಜುರವರು ಒಬ್ಬರೇ ಆಡಿದ ಒಳ್ಳೆಯ ಮಾತನ್ನು ನೆನಪಿಸಿಕೊಳ್ಳುವುದು ನನ್ನ ಕರ್ತವ್ಯ. ಸಾವಯವ ಕೃಷಿಗಾಗಿ ಇವತ್ತು ಏನು ಹಣ ಕೊಡುತ್ತಿದ್ದೇವೆ, ಸಾವಯವ ಕೃಷಿ ಅಧಿಕಾರಿಗಳ ಕೈಕೆಳಗೆ ಇರುವುದಕ್ಕಿಂತ ರೈತನ ನಾಯಕತ್ವದಲ್ಲಿ ಇರಲಿ. ಆ ರೈತರು ತೀರ್ಮಾನ ಮಾಡಲಿ ಎನ್ನುವುದಕ್ಕಾಗಿ ಸಾವಯವ ಕೃಷಿಗಾಗಿಯೇ ಒಂದು ಸಮಿತಿಯನ್ನು ರಚಿಸಿ ಅದರ ಮುಖಾಂತರ ಊರಿನಲ್ಲಿರುವ ರೈತರಿಗೆ ಹಣ ಕೊಡಿಸುವ ಕಾರ್ಯಕ್ರಮವನ್ನು ಜಾರಿಗೆ ತಂದಿರುವುದನ್ನು ನೋಡುತ್ತಿದ್ದೇವೆ. ಅಡಿಕೆಗೆ ಇಷ್ಟೊಂದು ಸಮಸ್ಯೆ ಇದೆ. ಅಡಿಕೆಗೆ ಒಂದು ಕಾಲದಲ್ಲಿ ದೊಡ್ಡ ಮಾರ್ಯದೆ ಇತ್ತು ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬರುವುದಿಲ್ಲವೆನ್ನುವ ಗಾದೆ ಇದೆ. ಇವತ್ತಿಗೂ ಆ ಗಾದೆ ಮಾತು ಇದೆ. ಆದರೆ ಇವತ್ತು ಅಡಿಕೆ ಪರಿಸ್ಥಿತಿ ಹೇಗಿದೆ ಎಂದರೆ ಒಂದು ಕಡೆ ಬೆಲೆ ಇಲ್ಲ, ಇನ್ನೊಂದು ಕಡೆ ಬೆಳೆಗೆ ಕಾಯಿಲೆ ಇದೆ. ಹಳದಿ ಎಲೆ ರೋಗ ಮತ್ತು ಬೇರು ಹುಳು ಸಮಸ್ಯೆಯಿಂದ ಅಡಿಕೆ ಬೆಳೆಯುವ ರೈತರು ಸಂಕಷ್ಟದಲ್ಲಿದ್ದಾರೆ. ಇಂಥ ಅಡಿಕೆಗೆ ನಮಗೆ ಯಾವ ತರಹದ ಪರಿಹಾರ ಬಂತೆಂದರೆ, ಅಡಿಕೆಗೆ ಕಾಯಿಲೆ ಬಂದಿದ್ದರಿಂದ ನಾವು ತೊಂದರೆಗೊಳಗಾಗಿದ್ದೇವೆ, ಇನ್ನೊಂದು ಕಡೆ ಅದರ ಬೆಲೆ ಕಡಿಮೆಯಾಗುತ್ತಿದೆ. ಇಂಥ ಸಂದರ್ಭದಲ್ಲಿ ಆಶ್ಚರ್ಯವೆನಿಸುವ ರೀತಿಯಲ್ಲಿ ಒಂದು ಆದೇಶ ಬರುತ್ತದೆ. ಗುಟ್ಕಾವನ್ನು ಮಾತ್ರ plastic cover ನಲ್ಲಿಡಬಾರದು, ಇನ್ನುಳಿದವೆಲ್ಲವನ್ನೂ Plastic ನಲ್ಲಿ ಮಾರಬಹುದು, ಅಂದರೆ ಹಾಲು, alcohol, ಸಿಗರೇಟ್, ಮಾತ್ರೆ, ಕುಡಿಯುವ ನೀರು ಇನ್ನೇನಿವೆ ಅವೆಲ್ಲವನ್ನೂ plastic sachet ಗಳಲ್ಲಿ ಕೊಡುತ್ತಾರೆ. ಈ ದೇಶ, ರಾಜ್ಯದಲ್ಲಿ ಅದರಿಂದ ಪರಿಸರ ಮಾಲಿನ್ಯವಾಗಲೇ ಇಲ್ಲ! ಆದರೆ ಅಡಿಕೆ ಮಾತ್ರ ಗುಟ್ಕಾದೊಳಗೆ ಬಂದ ಕೂಡಲೆ ಏನೋ ಸಮಸ್ಯೆ ಬಂತಂತೆ. ಈ ವಿಷಯ ಕೇಳಿ ನನಗೆ

ಭಯಂಕರ ಆಶ್ಚರ್ಯವೆನಿಸಿತು. ನಾವು ಪರಿಸರ ವಿರೋಧಿಗಳೇನೂ ಅಲ್ಲ. ನೀವು total ಆಗಿ plastic ಅನ್ನು ban ಮಾಡಿ. ನಾವು ಅದಕ್ಕೆ ಸಂಪೂರ್ಣ ಸಹಕಾರವನ್ನು ಕೊಡುತ್ತೇವೆ. ರಾಜ್ಯದೊಳಗಡೆ ಎಲ್ಲಿ ಏನಾಗಿದೆಯೋ ಗೊತ್ತಿಲ್ಲ. ಶೃಂಗೇರಿ ತಾಲ್ಲೂಕು plastic ಮುಕ್ತ ತಾಲ್ಲೂಕು ಆಗಬೇಕೆನ್ನುವುದಕ್ಕೆ ಮಠದಲ್ಲಿ ಕೊಡುವ ಪ್ರಸಾದದಿಂದ ಹಿಡಿದು, ಅಲ್ಲಿ ಕೊಡುವ ಸಣ್ಣ ಕವರ್ ಸಹ ಚೀಲದಲ್ಲಿ ಮಾಡಿರುವುದನ್ನು ಕೊಡಲಾಗುತ್ತಿದೆ ಮತ್ತು ಅಲ್ಲಿಯ ಅಂಗಡಿಗಳಲ್ಲಿ plastic cover ನಲ್ಲಿ ಕೊಡುವುದಿಲ್ಲ ಎಂದು ಶೃಂಗೇರಿಯಲ್ಲಿ ಶೃಂಗೇರಿ ಪಟ್ಟಣ ಪಂಚಾಯತಿ ಮತ್ತು ಅಲ್ಲಿರುವ ಸಂಘ ಸಂಸ್ಥೆಗಳು ಸೇರಿ ಚಾಲನೆಗೆ ಕೊಟ್ಟಿರುವುದು ಒಂದು ವರ್ಷದಿಂದ ಜಾರಿಯಲ್ಲಿದೆ. plastic ಇರಬೇಕೆಂದು ನಾವು ಹೇಳುವವರಲ್ಲ. ಹೇಳುವುದಿಲ್ಲ. ಆದರೆ plastic ಅಡಿಕೆಗೆ ಮಾತ್ರ ಏಕೆ ಇರಬಾರದು? ನಾನು ಎಲ್ಲಾ ಕಾಲದಲ್ಲಿ ನೋಡಿದ್ದೇನೆ. ಯಾವಾಗ ಅಡಿಕೆಗೆ ಬೆಲೆ ಬರುತ್ತದೋ ಆಗ ಒಂದು ಹೇಳಿಕೆ ಬರುತ್ತದೆ. ಏನೆಂದರೆ, ಗುಟ್ಕಾ ban ಎಂದೋ ಇಲ್ಲವೇ plastic ban ಎಂದೋ ಈ ತರಹದ ಸುದ್ದಿಗಳನ್ನು ನಾವು ಕೇಳುತ್ತಿದ್ದೇವೆ. ಇದರಿಂದ ಅಡಿಕೆ ಬೆಳೆವ ರೈತ ಅತ್ಯಂತ ಸಂಕಷ್ಟಕ್ಕೆ ಸಿಲುಕಿದ್ದಾನೆ. ಸರ್ವ ಪಕ್ಷ ನಿಯೋಗವನ್ನು ಮಾನ್ಯ ಮುಖ್ಯಮಂತ್ರಿಯವರು ಕರೆದುಕೊಂಡು ಹೋಗಿದ್ದರು. ಆ ನಿಯೋಗದ ಜೊತೆ ಮಾನ್ಯ ಸಿದ್ದರಾಮಯ್ಯನವರು ಮತ್ತು ತಾವು ಎಲ್ಲಾ ಬಂದಿದ್ದೀರಿ. ಅಂದು ಕೇಂದ್ರ ಮಂತ್ರಿಯವರ ಜೊತೆ ಚರ್ಚೆ ನಡೆಯಿತು. ಅದಾದಮೇಲೆ ಇವತ್ತಿನವರೆಗೂ ಅದರ ತೀರ್ಮಾನ ಆಗಿಲ್ಲ. ಆದರೆ, ದೇಶದಲ್ಲಿ ಯಾವುದಾದರೂ ಒಂದು ಸರ್ಕಾರ ರೈತರ ಪರವಾಗಿ supreme court ನಲ್ಲಿ senior counsel ಅನ್ನು ನೇಮಿಸಿದ್ದರೆ ಅದು ನಮ್ಮ ಸರ್ಕಾರ, ಮಾಜಿ ಮುಖ್ಯಮಂತ್ರಿಗಳಾದ ಯಡಿಯೂರಪ್ಪನವರು, ನಮ್ಮ ಸರ್ಕಾರ ಸೋಲಿ ಸೊರಬ್ಜಿಯವರನ್ನು ಕೇಂದ್ರದಲ್ಲಿ ರೈತರ ಪರವಾಗಿ ವಕೀಲರಾಗಿ ವಾದಿಸಲು ನೇಮಿಸಿದರು ರೈತರ ಪರವಾದ ಆಲೋಚನೆಗಳೂ ಏನಾದರೂ ಬರುತ್ತಿದ್ದರೆ ಅದು ನಮ್ಮ ಸರ್ಕಾರಕ್ಕೆ ಮಾತ್ರ. ಅಡಿಕೆ ಸುಲಿಯುವ ಮೆಷಿನ್‌ಗೆ ಮೊದಲನೇ ಬಾರಿಗೆ subsidy ಯನ್ನು ಕಳೆದ ವರ್ಷ ಮತ್ತು ಅದರ ಹಿಂದಿನ ವರ್ಷದಿಂದ ಕೊಡುತ್ತಿದ್ದೇವೆ, ಈ ವರ್ಷವೂ ಕೊಡಲಾಗುತ್ತದೆ. ಇಲ್ಲಿ tiller ಬಗ್ಗೆ ಚರ್ಚೆ ನಡೆಯುತ್ತಿದೆ. ನಾನು ಅಂಕಿ ಅಂಶ ಇಟ್ಟುಕೊಂಡು ಗಮನಿಸುತ್ತಿದ್ದೆ. Tiller ಗೇನೂ ಕಡಿಮೆ ಹಣ ಕೊಟ್ಟಿಲ್ಲ. ಆದರೆ, ಕೆಲವು ತಾಲ್ಲೂಕು, ಜಿಲ್ಲೆಗಳಲ್ಲಿನ ಅಂಕಿ ಅಂಶದ ವ್ಯತ್ಯಾಸವನ್ನು ನಾನು

ಈ ಉತ್ತರದಲ್ಲಿ ಗಮನಿಸಿದ್ದೇನೆ. ಮಾನ್ಯ ಸದಸ್ಯರಾದ ಅಪ್ಪಚ್ಚು ರಂಜನ್ ರವರು ಇಲ್ಲಿ, ನೀವೇ ಪುಣ್ಯಾತ್ಮರು ಕಣಯ್ಯ, ನಾವೆಲ್ಲ ಶಾಸಕರಾಗಿ ಹಿಂದೆ ಇದ್ದಾಗ 5 ವರ್ಷಗಳಿಗೆ 5 tiller ಮಾತ್ರ ಕೊಟ್ಟಿದ್ದರು ಎಂದು ಹೇಳುತ್ತಿದ್ದರು. ನಾನು ನನ್ನ ಕ್ಷೇತ್ರದ ಅಂಕಿಅಂಶಗಳನ್ನು ನೋಡಿದೆ. 5 ವರ್ಷಗಳಿಗೆ 24 tiller ಮತ್ತು 3 tractor ಗಳನ್ನು ಹಿಂದೆ ನನ್ನ ವಿಧಾನ ಸಭಾ ಕ್ಷೇತ್ರದೊಳಗೆ ಕೊಟ್ಟಿದ್ದರು. ಅದಾದ ನಂತರ ನನ್ನ ಕ್ಷೇತ್ರದೊಳಗೆ ಮತ್ತು ನನ್ನ ಜಿಲ್ಲೆಯೊಳಗಡೆ ಹೆಚ್ಚು tiller, tractor ಗಳನ್ನು ಕೊಡಲಿಕ್ಕೆ ಆಗಿತ್ತು. ನನ್ನ ಜಿಲ್ಲೆಗೆ ಕೊಟ್ಟಿರುವ ಅಂಕಿ ಅಂಶಗಳನ್ನು ನೋಡಿದಾಗ ನನ್ನ ಜಿಲ್ಲೆಗಿಂತ ಬೇರೆ ಬೇರೆ ಜಿಲ್ಲೆಗಳಿಗೆ ಜಾಸ್ತಿ, tiller, tractor ಗಳನ್ನು 2009–10ರಿಂದ ಕೊಟ್ಟಿದ್ದಾರೆ. ಆ ಬಗ್ಗೆ ಅಂಕಿ ಅಂಶ ಇದೆ. ನಾವು ಪೂರ್ಣ ಕೊಟ್ಟಿದ್ದೇವೆ, ಉಳಿದವರಿಗೆ ಕೊಡಲಿಲ್ಲ ಎಂದು ಹೇಳಲಿಕ್ಕೆ ಅಲ್ಲ. ಆದರೆ, ಕೆಲವು ಜಿಲ್ಲೆಗಳಲ್ಲಿ ಎಲ್ಲೋ ವ್ಯತ್ಯಾಸವಾಗಿದೆ ಎನ್ನುವುದನ್ನು ಕೇಳಿದ್ದೇನೆ. ಮಾನ್ಯ ಕೃಷಿ ಮಂತ್ರಿಯವರು ಇದನ್ನು ಸರಿಪಡಿಸುತ್ತಾರೆ ಎಂದು ನಾನಂತೂ ಭಾವಿಸುತ್ತೇನೆ. Drip Irrigation ಇರಬಹುದು, pipeline ಇರಬಹುದು, ಅವುಗಳಿಗೆ ಕರ್ನಾಟಕ ಸರ್ಕಾರ ಕೊಡುತ್ತಿರುವ ಹಣ ಕಡಿಮೆ ಏನೂ ಅಲ್ಲ. ಮೆಣಸಿನ ಬಳ್ಳಿ ಮಾಡಿ ರೈತರಿಗೆ ಕೊಡುವಂಥದ್ದು ಮತ್ತು Copper Sulphate ಅನ್ನು 50% subsidy ಯಲ್ಲಿ ಕೊಡುತ್ತಿರುವುದು ನಮ್ಮ ಸಾಧನೆಗಳಿವೆ. ಈ ರೀತಿ ಹೆಚ್ಚು ಅಭಿವೃದ್ಧಿ ಕಾರ್ಯಕ್ರಮವನ್ನು ಮಾಡುವುದಕ್ಕಾಗಿದೆ. ಆದರೆ, ಬರಗಾಲದ ಪರಿಸ್ಥಿತಿಯಲ್ಲಿ ಕರೆಂಟ್ ಅನ್ನು ಹೆಚ್ಚು ಕೊಡುವುದಕ್ಕಾಗದಿದ್ದರೂ ಇಲ್ಲಿಯವರೆಗೆ ಸಮಸ್ಯೆ ಇಲ್ಲದೆ ಬಹಳ ಸಮಸ್ಯೆಯಾಗದ ರೀತಿಯಲ್ಲಿ ಕರೆಂಟ್ ಅನ್ನು ಕೊಟ್ಟಿದ್ದಾರೆ. ನಿನ್ನೆ ವಿದ್ಯುತ್ ಮಂತ್ರಿಗಳು 31/3ರ ರವರೆಗೆ ಅಕ್ರಮ ಸಕ್ರಮಕ್ಕೆ ಸಮಯ ಕೊಡುತ್ತೇವೆಂದು ಹೇಳಿದರು. ಇದು ಬಹಳ ಒಳ್ಳೆಯ ನಿರ್ಧಾರ. ಈ ನಿರ್ಧಾರದ ಅವಶ್ಯಕತೆ ಇತ್ತು. ಈ ಅಕ್ರಮ ಸಕ್ರಮ ಎಂದು ಹೇಳಿದಾಗಲಾದರೂ ನಾವು ಸಕ್ರಮ ಮಾಡಿಕೊಳ್ಳದಿದ್ದರೆ, ಸಕ್ರಮ ಮಾಡಿಕೊಳ್ಳದೆ ಇದ್ದಾಗ ಮಾತ್ರ ಅಂಥ ರೈತರ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಇಷ್ಟೆಲ್ಲ ಅವಕಾಶಗಳನ್ನು ಕೊಟ್ಟಮೇಲೂ ಮಾಡಿಕೊಳ್ಳಿಲ್ಲವೆಂದರೆ ಕಷ್ಟ. ಅದಕ್ಕೇನೂ ಹಣ ಬೇಕಿಲ್ಲ. ಸಕ್ರಮ ಮಾಡುವುದಕ್ಕೆ ಮಾತ್ರ ಹಣ ಕೊಡಬೇಕು, ಆಮೇಲೆ ಹೇಗೂ ಫ್ರೀ ಇದೆ. ಅದು ಅದಾಗಲೂ ನಾವು ಮಾಡಿಕೊಳ್ಳಲಿಲ್ಲೆವೆಂದರೆ ಸರಿಯಲ್ಲ. ಇದನ್ನು ನಾವು ಮಾಡಿಕೊಳ್ಳಬೇಕಾಗುತ್ತದೆ. ವರ್ಷದಲ್ಲಿ ಎಷ್ಟು ಕರೆಂಟ್ ಖರ್ಚಾಗುತ್ತದೆ ಎನ್ನುವ ಅಂಕಿ

ಅಂಶ ಗೊತ್ತಾಗಬೇಕಾಗುತ್ತದೆ. MESCOM ನಲ್ಲಿ ಇಷ್ಟು ಸಮಸ್ಯೆ ಇಲ್ಲ. ಇರುವುದರಲ್ಲಿ MESCOM ನಲ್ಲಿ ಸ್ವಲ್ಪ ಹಣ ಕಟ್ಟುತ್ತಾರೆ. ಆದರೆ, ಈ ಕಡೆ ಭಾಗದಲ್ಲಿ ಹಣ ಕಟ್ಟುತ್ತಾರೋ, ಇಲ್ಲವೋ ಗೊತ್ತಿಲ್ಲ. ಕಟ್ಟಿಲ್ಲವೆಂದು ನಾನು ಅಂಕಿ ಅಂಶ ಇಲ್ಲದೆ ಹೇಳುವುದಿಲ್ಲ. ಆದರೆ, ನಾವು MESCOM ಭಾಗದಲ್ಲಿ ಹೆಚ್ಚು ಹಣ ಕಟ್ಟುತ್ತಿದ್ದೇವೆ ಮತ್ತು ಅದರೊಳಗೆ ಹೆಚ್ಚು ಕಾನೂನಿನ ಚೌಕಟ್ಟಿನೊಳಗಡೆ ಇದೆ. ನಿನ್ನೆ ಮೇಡಂನವರು ಕೊಟ್ಟಿರುವ ಅಂಕಿ ಅಂಶಗಳನ್ನು ನೋಡಿದ ಮೇಲೆ ನಾನು ಅವರ ಹತ್ತಿರ ನಮ್ಮಲ್ಲಿ ಹೀಗೆ ಆಗಿಲ್ಲವಲ್ಲ ಇಷ್ಟೊಂದು ಅಕ್ರಮ ಸಕ್ರಮ ಎಲ್ಲಿದೆ ಎಂದು ಕೆಳಿದ್ದಕ್ಕೆ ನೀವು ಮೆಸ್ಕಾಂ ಕಡೆ ಯೋಚನೆ ಮಾಡಬೇಡಿ, ಉಳಿದ ಕಂಪನಿಯೊಳಗಡೆ ಈ ತರಹದ ಒಂದು ವ್ಯವಸ್ಥೆಯಿದೆ ಎಂದರು. ನಾನೊಬ್ಬ ರೈತನ ಮಗನಾಗಿ ರೈತರುಗಳು ಕೂಡ ಇದನ್ನು ಸಕ್ರಮಗೊಳಿಸಿಕೊಳ್ಳುವ ಕಡೆಗೆ ಗಮನಹರಿಸುವುದು ಒಳ್ಳೆಯದೆಂದು ನಾನು ಈ ಸಂದರ್ಭದಲ್ಲಿ ಸಲಹೆ ಕೊಡಬಯಸುತ್ತೇನೆ. ಹಳದಿ ಎಲೆ ಎನ್ನುವ ಒಂದು ರೋಗ ಎಲ್ಲಿಗೂ ಬರುವುದು ಬೇಡ, ಈಗ ಅದು ನಮ್ಮ ಕ್ಷೇತ್ರದೊಳಗೆ ಇದೆ. ತುಮಕೂರಿನಲ್ಲೂ ಮತ್ತು ಈ ಕಡೆಗೂ ಕೂಡ ಅಡಿಕೆ ಬೆಳೆದಿದ್ದಾರೆ. ನಾನು ಮೊನ್ನೆ ಮುಖ್ಯಮಂತ್ರಿಗಳಿಗೆ ಹೇಳುತ್ತಿದ್ದೆ. ನಿಮ್ಮ ಹೆಂಡತಿಯ ಮನೆ ಮಡಿಕೇರಿ, ನಿಮ್ಮ ಊರು ಸುಳ್ಯ, ನೀವು ನಿಂತಿದ್ದು ಚಿಕ್ಕಮಗಳೂರು ಜಿಲ್ಲೆಯ ಲೋಕಸಭಾ ಸದಸ್ಯರು. ನಿಮ್ಮ ಅಂದರೆ ಹೆಂಡತಿಯ ಮನೆ, ಅಪ್ಪನ ಮನೆ, ನಿಮ್ಮ ರಾಜಕೀಯದ ಲೋಕಸಭಾ ಕ್ಷೇತ್ರ, ಈ ಮೂರು ಕಡೆಗಳಲ್ಲೂ ಹಳದಿ ಎಲೆ ರೋಗವಿದೆ. ಹೀಗಾಗಿ ಅಲ್ಲಿನ ರೈತರಿಗೆ ನೀವು ಏನಾದರೊಂದು ವ್ಯವಸ್ಥೆ ಮಾಡಿಬಿಟ್ಟರೆ ನೀವು ಮೂರು ಕಡೆಗೂ ಸವಲತ್ತು ಕೊಟ್ಟಂಥ ಭಾಗ್ಯ ನಿಮಗೆ ಬರುತ್ತದೆ ಎಂದು ಹೇಳಿದೆ. ಈ ಹಳದಿ ಎಲೆ ರೋಗ ಮನುಷ್ಯ ತಡೆಯಲಿಕ್ಕಾಗದಂಥ ಕಾಯಿಲೆಯಾಗಿದೆ. ನೂರು ಕ್ವಿಂಟಾಲ್ ಅಡಿಕೆ ಬೆಳೆಯುತ್ತಿದ್ದ ರೈತ ಇವತ್ತು ಹತ್ತು ಕ್ವಿಂಟಾಲ್ ಅಲ್ಲ ಹತ್ತು ಕೆ.ಜಿ.ಗೆ ಬಂದಿದ್ದಾನೆ. ಇನ್ನು ಕೆಲವರು ಎಲೆ ಅಡಿಕೆ ಹಾಕುವುದಕ್ಕೂ ಪಕ್ಕದ್ಮನೆಯಿಂದ ಅಡಿಕೆ ತೆಗೆದುಕೊಂಡು ಬಂದು ಎಲೆ ಅಡಿಕೆ ಹಾಕುವಂಥ ಸ್ಥಿತಿಗೆ ತಲುಪಿದ್ದಾರೆ. ಇಂಥ ಒಂದು ಗಂಭೀರವಾದ ಕಾಯಿಲೆ ಹಳದಿಎಲೆ ರೋಗ. ಈ ರೋಗಕ್ಕೆ ಮಾನ್ಯ ಮುಖ್ಯಂತ್ರಿಗಳು ಬಜೆಟ್‌ನಲ್ಲಿ ಸಂಶೋಧನಾ ಕೇಂದ್ರವನ್ನು ಘೋಷಣೆ ಮಾಡಿಕೊಟ್ಟರು. ಸಂಶೋಧನೆ ನಡೆಯುತ್ತಿದೆ. ಸಂಶೋಧನೆ ಕೇಂದ್ರವೂ ಆಗಿದೆ ಆದರೆ ಅದಕ್ಕೆ ಉತ್ತರ ಸಿಗಲಿಲ್ಲ. ಇಂಥ ಸಂದರ್ಭದಲ್ಲಿ ಸಂಶೋಧನೆಗೆ ನಾವು ಏನೂ

ಮಾಡುವುದಕ್ಕಾಗಿಲ್ಲ. ನಮ್ಮ ವಿಜ್ಞಾನಿಗಳಿಗೆ ಸ್ವಲ್ಪ ತಡವಾಗಿಯಾದರೂ ಫಲ ಸಿಕ್ಕಬಹುದು. ಆ ಫಲ ಸಿಗುವವರೆಗೆ ರೈತರು ಬಹಳ ಕಷ್ಟಕ್ಕೆ ಸಿಗುತ್ತಾರೆ. ಅದಕ್ಕಾಗಿ ಒಂದಿಷ್ಟು ಹಣ ರೈತರಿಗೆ ಕೊಡ ಬೇಕಾಗುತ್ತದೆ. ಆ ಹಣ ರೈತರಿಗೆ ಕೊಡಬೇಕು ಎನ್ನುವ ಒತ್ತಾಯವನ್ನು ನಾನು ಮುಖ್ಯಂತ್ರಿಗಳಿಗೆ ಅವರು ಚಿಕ್ಕಮಗಳೂರಿಗೆ ಬಂದಾಗಲೂ ಮಾಡಿದ್ದೇನೆ ಈಗಲೂ ನಾವು ಅದೇ ಒತ್ತಾಯ ಮಾಡುತ್ತಿದ್ದೇವೆ. ನಮಗೆ ಏಕೋ ಗೊತ್ತಿಲ್ಲ ಘೋರಕ್‌ಸಿಂಗ್ ಸಮಿತಿಯನ್ನು ನೇಮಕ ಮಾಡಿದ್ದು ಕೇಂದ್ರ ಸರ್ಕಾರ. ನಾವೆಲ್ಲಾ ಹೋಗಿ ಅಲ್ಲಿ ಕೇಳಿದಾಗ ಕೇಂದ್ರ ಸರ್ಕಾರ ಆ ಸಮಿತಿಯನ್ನು ನೇಮಿಸಿತು. ಘೋರಕ್‌ಸಿಂಗ್ ರವರು ಶೃಂಗೇರಿ ವಿಧಾನ ಸಭಾ ಕ್ಷೇತ್ರ ಮಾತ್ರವಲ್ಲ ಹಳದಿ ಎಲೆ ರೋಗಪೀಡಿತ ಪ್ರದೇಶಗಳಿಗೆಲ್ಲಾ ಪ್ರವಾಸ ಮಾಡಿ ಹಳದಿ ಎಲೆ ರೋಗವಿದ್ದಂಥ ತೋಟಗಳನ್ನು ನೋಡಿ ರೈತರುಗಳ ಜೊತೆಗೆ ಚರ್ಚಿಸಿ ಅವರು ಒಂದು ಒಳ್ಳೆಯ ವರದಿ ಕೊಟ್ಟಿದ್ದಾರೆ. ಅದು ಮಂಡನೆಯಾಗಿರುವುದು ಕೇಂದ್ರ ಸರ್ಕಾರಕ್ಕೆ. ಅದು ಕರ್ನಾಟಕ ಸರ್ಕಾರಕ್ಕೆ ಮಂಡನೆಯಾಗಿಲ್ಲ. ಅದು ಕೇಂದ್ರ ಸರ್ಕಾರದ ಕೃಷಿ ಮಂತ್ರಿಗಳಿಗೆ ಮಂಡನೆಯಾಗಿದೆ. ನಾನು ನಮ್ಮ ಸರ್ಕಾರದ ಮುಖಾಂತರ, ತಮ್ಮ ಮುಖಾಂತರ, ನಮ್ಮ ವಿರೋಧ ಪಕ್ಷದವರು ಇದನ್ನು ಸಕಾರಾತ್ಮಕವಾಗಿ ಸ್ಪಂದಿಸುತ್ತಾರೆಂದು ಅಂದುಕೊಳ್ಳುತ್ತೇನೆ. ನಮ್ಮ ವಿರೋಧ ಪಕ್ಷಗಳು ಕೂಡ ಘೋರಕ್‌ಸಿಂಗ್ ಸಮಿತಿಯ ವರದಿಯನ್ನು ಕೇಂದ್ರ ಸರ್ಕಾರ ಒಪ್ಪುವಂತೆ ಒತ್ತಾಯ ಮಾಡಬೇಕು. ಕೇಂದ್ರ ಸರ್ಕಾರ ಘೋರಕ್ ಸಿಂಗ್ ಸಮಿತಿಯ ವರದಿಯನ್ನು ಒಪ್ಪಿ ಈ ಬಜೆಟ್‌ನಲ್ಲಿ ಅದಕ್ಕೆ ಹಣವನ್ನು ಕೊಡುವಂಥ ವ್ಯವಸ್ಥೆ ಜಾರಿ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇದು ಯಾವ ಪಕ್ಷಗಳ ಮೇಲೆ ಸರ್ಕಾರಗಳ ಮೇಲೆ ಆರೋಪ ಅಲ್ಲ. ಸಮಿತಿಯನ್ನು ನೇಮಿಸುವುದು ಕೇಂದ್ರ ಸರ್ಕಾರ ವರದಿ ಮಂಡನೆಯಾಗುವುದು ಕೇಂದ್ರ ಸರ್ಕಾರಕ್ಕೆ ಅದನ್ನು ರಾಜ್ಯ ಸರ್ಕಾರ ಮಾಡಲಿಕ್ಕೆ ಬರಲ್ಲವೆಂದು ನಾನಂತೂ ಅಂದುಕೊಂಡಿದ್ದೇನೆ. ಕೇಂದ್ರ ಸರ್ಕಾರ ರೈತರ ಪರವಾದ ಕಳಕಳಿಯಿಂದ ಒಂದು ಚುಕ್ಕೆಯಷ್ಟು ಹಣ ಕೊಟ್ಟರೆ ನಮ್ಮ ಕ್ಷೇತ್ರದ ರೈತರುಗಳು ಬದುಕುತ್ತಾರೆ. ಅದನ್ನು ಕೊಡಿಸುವಂಥದ್ದು ಆಗಬೇಕು. ಅದು ರಾಜ್ಯ ಸರ್ಕಾರಕ್ಕೆ ಬಂದರೆ, ಕಾಫಿ ಪ್ಯಾಕೇಜ್‌ಗೆ ಕೇಂದ್ರ ಸರ್ಕಾರ ಹಣ ಕೊಟ್ಟಾಗ ಕರ್ನಾಟಕ ಸರ್ಕಾರ ಮೂರು ಜಿಲ್ಲೆಗಳ ರೈತರಿಗೆ ಇಪ್ಪತ್ತುಕೋಟಿ ರೂಪಾಯಿಗಳನ್ನು ಕಾಫಿ ಪ್ಯಾಕೇಜ್‌ಗಿನ ಕಾಫಿ ಸಹಕಾರ ಸಂಘಗಳಿಗೆ ಕೊಡದಿದ್ದರೆ ಆ ಕಾಫಿ ಪ್ಯಾಕೇಜ್ ಸರಿ

ರೀತಿ ಇಂಪ್ಲಿಮೆಂಟ್ ಆಗುತ್ತಿರಲಿಲ್ಲ. ಆ ಇಪ್ಪತ್ತು ಕೋಟಿ ರೂಪಾಯಿಗಳನ್ನು ಕೊಡುವಂಥ ಯೋಜನೆಯನ್ನು ಕರ್ನಾಟಕ ಸರ್ಕಾರ ಜಾರಿ ಮಾಡಿತು. ಅದನ್ನು ಕೊಟ್ಟದ್ದರಿಂದ ಕಾಫಿ ಪ್ಯಾಕೇಜ್ ಜಾರಿಗೆ ಬಂತು. ಅದನ್ನು ಮಾಡುವಂಥದ್ದಾಗಲಿ. ಮೊನ್ನೆ ನಮ್ಮ ಕೇಂದ್ರದ ಮಂತ್ರಿಗಳಾದ ಮಾನ್ಯ ವೀರಪ್ಪ ಮೊಯಿಲಿಯವರು ಮತ್ತು ಅಸ್ಕರ್ ಫರ್ನಾಂಡೀಸ್‌ರವರು ಶೃಂಗೇರಿ ವಿಧಾನ ಸಭಾ ಕ್ಷೇತ್ರಕ್ಕೆ ಬಂದು ಒಂದು ಸಭೆ ಮಾಡಿ ಹೋಗಿದ್ದಾರೆ. ನಾನು ಅವರ ಸಭೆಯನ್ನು ಸ್ವಾಗತಿಸುತ್ತೇನೆ. ಅವರು ಆ ಸಭೆಯೊಳಗೆ ಒಂದು ಹೆಜ್ಜೆ ಮುಂದಕ್ಕೆ ಹೋಗಿ ಈ ವರದಿಯನ್ನು ನಾವು ಒಪ್ಪಿ ಇದಕ್ಕೆ ಹಣ ಕೊಡುತ್ತೇವೆಂದು ಹೇಳಿಬಿಟ್ಟಿದ್ದರೆ ಇನ್ನಷ್ಟು ಸಂಭ್ರಮವಿರುತ್ತಿತ್ತು. ಇದಕ್ಕೆ ಪಕ್ಷವಿಲ್ಲ, ಅವರು ಕೇಂದ್ರದ ಮಂತ್ರಿಗಳಾಗಿದ್ದಾರೆ ನಾನು ಆ ಕ್ಷೇತ್ರದ ಶಾಸಕನಾಗಿ ಅವರಿಗೆ ಅಭಿನಂದನೆಗಳನ್ನು ಹೇಳಿ ಹಾರ ಹಾಕಿ ಬರುತ್ತಿದೆ. ಅವರು ಅದನ್ನು ಹೇಳುವುದಕ್ಕೆ ಇನ್ನೊಮ್ಮೆ ಬರಲಿ ಅವರು ಅದನ್ನು ಹೇಳಲಿ ಎನ್ನುವಂಥದ್ದು ನನ್ನ ಒತ್ತಾಯ. ಕೇಂದ್ರ ಮಂತ್ರಿಗಳು ಹಾಗೆ ಬಂದರೆ ಪ್ರಯೋಜನವಿಲ್ಲ. ಯಾವಾಗಲೂ ಸಂತೆಯಿಂದ ಅಜ್ಜ ಬರುವಷ್ಟೊತ್ತಿಗೆ ಮಕ್ಕಳು ಚಾಕೊಲೇಟ್, ಬಿಸ್ಕೆಟ್ ತಂದಿರಬಹುದು ಎಂದು ಕಾಯುತ್ತಿರುತ್ತಾರೆ. ನಾವು ಅದೇ ತರಹ ವೀರಪ್ಪ ಮೊಯಿಲಿಯವರು ಬರುತ್ತಿದ್ದಾರೆ ಎಂದರೆ ಏನೋ ಒಂದು ಪ್ಯಾಕೇಜ್ ತಂದಿದ್ದಾರೆ ಅದನ್ನು ಕೊಡುತ್ತಾರೆಂದು ನಾವು ಕಾಯುತ್ತಿದ್ದೆವು. ಆದರೆ ನಮಗೆ ಅದು ಬರಲಿಲ್ಲ. ಅದು ನಮಗೆ ಸಿಗಬೇಕಾಗಿತ್ತು ಅದನ್ನು ಮುಂದಾದರೂ ಕೊಡುತ್ತಾರೆನ್ನುವ ಭರವಸೆ ನನಗಿದೆ. ನಾವು ಇವತ್ತು ಇಷ್ಟೆಲ್ಲಾ ಒಳ್ಳೆಯ ಕಾರ್ಯಕ್ರಮಗಳನ್ನು ಮಾಡಿದ್ದೇವೆ. ನಾವು ಮಾಡಿರುವಂಥ ರೈತರ ಕಾರ್ಯಕ್ರಮಗಳು ಬಹಳ ಒಳ್ಳೆಯ ಕಾರ್ಯಕ್ರಮಗಳು, ಇದರಲ್ಲೇನು ಎರಡನೇ ಪ್ರಶ್ನೆಯಿಲ್ಲ. ಹೇಳುತ್ತಾ ಹೋದರೆ ಬಹಳ ಉದ್ದವಾದ ಭಾಷಣ ಮಾಡಬೇಕು, ಆದರೆ ಇವತ್ತು ಶುಕ್ರವಾರ ಆಗಿರುವುದರಿಂದ ಬೇಗ ಹೋಗಬೇಕಾಗಿದೆ. ಆದರೆ. ಒಂದಂತೂ ಸತ್ಯ. ಇಷ್ಟಲ್ಲದರ ಮಧ್ಯೆ ಒಂದಿಷ್ಟು ಕಾರ್ಯಕ್ರಮಗಳನ್ನು ನಮ್ಮ ಸರ್ಕಾರ ಮಾಡಬೇಕಾಗುತ್ತದೆ. ನಾನು ನಮ್ಮ ಮುಖ್ಯಮಂತ್ರಿಗಳಿಗೆ ಸಣ್ಣ ಒತ್ತಾಯ ಮಾಡುತ್ತೇನೆ. ಈಗ ಒಂದು ಪರ್ಸೆಂಟ್‌ಗೆ ಸಾಲ ಕೊಡುತ್ತಿದ್ದೇವೆ. ಆ ಪರ್ಸೆಂಟ್ ಎನ್ನುವುದು ಏನೋ ಬಹಳ ಲೆಕ್ಕದ ದುಡ್ಡಲ್ಲ. ಬಡ್ಡಿ ರಹಿತವಾಗಿ ಸಾಲ ರೈತರಿಗೆ ಕೊಟ್ಟಿದ್ದೇವೆಂದು ನಾನು ಹೇಳಬೇಕಾದರೆ ಅದು ಬಹುಶಃ ಈ ದೇಶದಲ್ಲಿ ಮೊದಲನೆ ಸರ್ಕಾರ ನಮ್ಮದೇ ಆಗುವುದು. ಇನ್ಯಾರದ್ದು ಇಲ್ಲ. ಆ ಬಡ್ಡಿ

ರಹಿತ ಸಾಲ ಈ ವರ್ಷ ಕೊಟ್ಟು ಬಿಡಿ ಎಂದು ನಾನು ನಮ್ಮ ಮುಖ್ಯಮಂತ್ರಿಗಳಿಗೆ ನನ್ನ ಒಂದು ಸಣ್ಣ ಸಲಹೆಯನ್ನು ಇದರ ಜೊತೆಗೆ ಸೇರಿಸುತ್ತೇನೆ. ಇಷ್ಟಲ್ಲದರ ಮಧ್ಯದಲ್ಲಿ ದಿನ ಚರ್ಚೆ ನಡೆಯುತ್ತಿದೆ, ಈ ಫಾರಂ ನಂಬರ್ 50, 53 ನಲ್ಲಿ ಅರ್ಜಿ ಕೊಟ್ಟಿರುವಂಥ ರೈತರಿಗೆ ಸಕ್ರಮ ಮಾಡಿ ಅವರಿಗೆ ಸಾಗುವಳಿ ಚೀಟಿ ಕೊಡಬೇಕು ಎನ್ನುವಂಥ ಚರ್ಚೆ ನಡೆಯುತ್ತಿದೆ. ಆದರೆ ಈ ರಾಜ್ಯದಲ್ಲಿ ಇದನ್ನು ಬಹಳಷ್ಟು ಕೊಡುವುದಕ್ಕಾಗಿಲ್ಲ. ಇದನ್ನು ಕೊಡುವುದಕ್ಕಾಗದಿರುವುದಕ್ಕೆ ಬಹಳ ಮುಖ್ಯವಾದ ಸಮಸ್ಯೆಯಿರುವುದು ನಮಗೆ ಪರಿಸರದ ಬಗ್ಗೆ ಇದ್ದಂಥ ಬಹಳ ಕಾಳಜಿಯೇ ನಮಗೆ ವಿಷವಾಗಿ ಬಿಟ್ಟಿದೆ. ಇದು ನಮಗೆ ಬೇಡವಾಗಿತ್ತು. ನಾವು ಫಾರಂ 50 ಗೆ ಅರ್ಜಿ ಕೊಟ್ಟಿರುವುದು 1988–89 ರಲ್ಲಿ. 1998–99 ರಲ್ಲಿ ಫಾರಂ 53ಗೆ ಅರ್ಜಿ ಕೊಟ್ಟಿದೆ. 1988–89 ರಿಂದ ಇಲ್ಲಿಯತನಕ ಎಷ್ಟು ವರ್ಷಗಳಾದವು? ನಾವು ಆ ದಿವಸ ಅರ್ಜಿ ಕೊಟ್ಟಾಗ ಅಲ್ಲಿ ಮರಗಳು ಇರಲಿಲ್ಲ. ಈಗ ಇವರು ಅದನ್ನು ಫಾರೆಸ್ಟ್ ಎಂದು ಹೇಳುತ್ತಾರೆ. ನನ್ನ ಕ್ಷೇತ್ರದೊಳಗೆ ಆ ಸಮಿತಿಯಲ್ಲಿ ಸುಮಾರು 1400 ಅರ್ಜಿಗಳನ್ನು ಪಾಸ್ ಮಾಡಿದ್ದೇವೆ. ಆದರೆ, ಒಂದಕ್ಕೂ ಸಾಗುವಳಿ ಚೀಟಿ ಕೊಡುವುದಕ್ಕಾಗಿಲ್ಲ. ಕೊಡಲಿಕ್ಕಾಗದಿರುವುದಕ್ಕೆ ಬಹಳ ಪ್ರಮುಖವಾದ ಕಾರಣ ಏನೆಂದರೆ, ಫಾರೆಸ್ಟ್ ಇಲಾಖೆಗೆ ಇದನ್ನು ಕೇಳಿದ ಕೂಡಲೇ ಅವರು ಅದನ್ನು ಡೀಮ್ಡ್ ಫಾರಸ್ಟ್ ಎನ್ನುವ ಪದವನ್ನು ಅದರ ಜೊತೆಗೆ ಸೇರಿಸಿ ಬಿಡುತ್ತಾರೆ. ಈ ಡೀಮ್ಡ್ ಫಾರಸ್ಟ್ ಎಂದರೆ ಏನು? ಎಕರೆಯಲ್ಲಿ ಹತ್ತು ಮರಗಳಿದ್ದರೆ ಅದನ್ನು ಫಾರೆಸ್ಟ್ ಎನ್ನುವ ತೀರ್ಮಾನಕ್ಕೆ ಅವರು ಬಂದು ಬಿಟ್ಟಿದ್ದಾರೆ. ಈ ಹತ್ತು ಮರಗಳೂ ಏಕೆ ಉಳಿದವು? 1988–89ರಲ್ಲಿ ನಾವು ಅರ್ಜಿ ಕೊಟ್ಟ ದಿನವೇ ಅಲ್ಲಿ ಇರುವ ಸಣ್ಣ ಸಣ್ಣ ಸಸಿಗಳು, ಸಣ್ಣ ಸಣ್ಣ ಗಿಡಗಳೇನಿದ್ದವು ಅವುಗಳನ್ನು ಕಡಿದು ಒಲೆಗೆ ಹಾಕಿ ಬಿಸಿನೀರು ಕಾಯಿಸಿ ಸ್ನಾನ ಮಾಡಿಬಿಟ್ಟಿದ್ದರೆ ಅಲ್ಲಿ ಡೀಮ್ಡ್ ಫಾರೆಸ್ಟ್ ಎನ್ನುವ ಕಲ್ಪನೆಯೇ ಇರುತ್ತಿರಲಿಲ್ಲ ಪೂರಾ ಮರಗಳು ಹೋಗಿರುತ್ತಿದ್ದವು. ನಾವು ಮಾಡಿದ್ದು ನಮಗೇ ಮುಳುವಾಗಿದೆ. ಮಲೆನಾಡಿನೊಳಗೆ ಕಾಡು ಉಳಿಯಲಿ ಒಳ್ಳೆಯ ಕಾಡು ಇರಲಿ ಎನ್ನುವ ರೈತನ ಕಲ್ಪನೆಯೇ ಇವತ್ತು ಅವರಿಗೆ ಸಾಗುವಳಿ ಚೀಟಿ ತೆಗೆದುಕೊಳ್ಳಲಿಕ್ಕಾಗದಂಥ ಕೆಟ್ಟ ಸಂಗತಿ ಎದುರಿಗೆ ಬಂದಿದೆ, ಈ ರೀತಿ ಆಗಬಾರದಾಗಿತ್ತು. ನಾನು ಅದಕ್ಕೆ ಒಂದು ಸಲಹೆ ಕೊಡುತ್ತೇನೆ. ಮರದ ಹಕ್ಕು ರೈತರಿಗಲ್ಲ; ಮರದ ಹಕ್ಕು ಸರ್ಕಾರಕ್ಕೆ, ಮರ ಯಾವುದೇ ಕಾರಣಕ್ಕೆ ರೈತರಿಗಾಗಬಾರದು. ಒಂದು ಅಫಿಡವಿಟ್ ಹಾಕಿಸಿ, ಸ್ಟಾಂಪ್

ಪೇಪರ್‌ನಲ್ಲಿ ಬರೆಯಿಸಿ ಒಂದು ಮರ ರೈತ ಹಾಳು ಮಾಡಿದರೆ ನಿನ್ನನ್ನು ಜೈಲಿಗೆ ಹಾಕುತ್ತೇವೆಂದು ಮಾಡಿ. ನಾವು ಮರ ಹಾಳು ಮಾಡುವವರಲ್ಲ. ಪರಿಸರ ಉಳಿಸುವವರಿದ್ದೇವೆ. ಮರವನ್ನು ಕಾಯ್ದಿರಿಸಿ ರೈತರಿಗೆ ಸಾಗುವಳಿ ಚೀಟಿ ಕೊಡಿ. ಇನ್ನೊಂದು ಕಾನೂನು ಇದೆ. ಮರದ ವ್ಯಾಲ್ಯೂ ಇಪ್ಪತ್ತೈದು ಸಾವಿರ ರೂಪಾಯಿಗಿಂತ ಹೆಚ್ಚು ಇದ್ದರೆ ಆ ಜಾಗವನ್ನು ರೈತರಿಗೆ ಕೊಡಬೇಡಿ ಎಂದು ಇದೆ. 1978–79ರಲ್ಲೋ ಇಪ್ಪತ್ತೈದು ಸಾವಿರ ರೂಪಾಯಿ valuation ಮಾಡಿಬಿಟ್ಟಿದ್ದಾರೆ. ಅದು ಇವತ್ತಿನ valuation ಅಲ್ಲ. 1978–79ರಲ್ಲಿ ಒಂದು ಸಿಎಫ್‌ಟಿ ಸಾಗುವಾನಿಗೆ ಇಪ್ಪತ್ತು ರೂಪಾಯಿ ಇತ್ತು. ಇವತ್ತು ಮೂರರಿಂದ ಐದು ಸಾವಿರ ರೂಪಾಯಿಯವರೆಗೆ ಇದೆ. ಈ ರೇಶಿಯೋ ಮೇಲೆ ಈಗಿರುವ ಇಪ್ಪತ್ತೈದು ಸಾವಿರ ರೂಪಾಯಿ ಕೂಡ ಏರಬೇಕಾಗಿತ್ತು. ಆ ದಿವಸ ಇಪ್ಪತ್ತು ರೂಪಾಯಿ ಇದ್ದಾಗ ಇಪ್ಪತ್ತೈದು ಸಾವಿರ ರೂಪಾಯಿ valuation ಇತ್ತು. ಇವತ್ತು ಮೂರರಿಂದ ಐದು ಸಾವಿರ ರೂಪಾಯಿಯಾದಾಗಲೂ ಸಹ ನಾವು ಅದನ್ನು ಅಲ್ಲಿಗೆ ತಂದು ನಿಲ್ಲಿಸಿದ್ದೇವೆ. ಇದು ಸರಿಯಲ್ಲ. ಇದನ್ನು ಬದಲಾಯಿಸಬೇಕಾಗುತ್ತದೆ. ರೈತರ ಪರವಾದ ಆಲೋಚನೆಗಳನ್ನು ಸರ್ಕಾರ ಮಾಡಿ ಇಷ್ಟಿಷ್ಟು ಒಳ್ಳೆಯ ಯೋಜನೆಗಳನ್ನು ತಂದಾಗ ಇದನ್ನು ಕೂಡ ಬದಲಾವಣೆ ಮಾಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಸಾ.ರಾ. ಮಹೇಶ್: ಮಾನ್ಯ ಉಪಾಧ್ಯಕ್ಷರೆ, ಅಕ್ರಮ ಸಕ್ರಮ ಸಮಿತಿಯ ಸಭೆಯನ್ನೇ ಮಾಡಬಾರದು ಎಂದು ಮೊನ್ನೆ ಲೆಟರ್ ಕಳುಹಿಸಿದ್ದಾರೆ ಅದರ ಕಡೆಗೂ ದಯಮಾಡಿ ಗಮನಹರಿಸಿ.

ಶ್ರೀ ಡಿ. ಎನ್. ಜೀವರಾಜ್: ಅದರ ಬಗ್ಗೆ ನಿನ್ನೆ ಬಹಳ ಚರ್ಚೆ ನಡೆಯಿತು. ಮತ್ತೇ ನೀವು ಹೇಳಿದ್ದನ್ನೆ ಹೇಳಿದರೆ ಅದು ಚರ್ವಿತ ಚರ್ವಣವಾಗುತ್ತದೆ. ಅದನ್ನು ಮತ್ತೆ ಮಾಡುವುದಿಲ್ಲ. ತಾವು ಹೇಳಿದ್ದೀರಿ, ನಮ್ಮ ಸರ್ಕಾರಕ್ಕೆ ಕಣ್ಣು ಕಿವಿ ಎರಡೂ ಇವೆ. ಹೀಗಾಗಿ ನೀವು ಹೇಳಿದ್ದನ್ನು ಬಹಳ ಬೇಗ ಕೇಳಿಸಿಕೊಂಡಿದೆ.

ಶ್ರೀ ಸಾ.ರಾ. ಮಹೇಶ್: ಅದು ತಮಗೆ ಕೇಳಿಸಿಲ್ಲವೆಂದು ಇನ್ನೊಂದು ಸಾರಿ ಜ್ಞಾಪಿಸಿದ್ದೇವೆ.

ಶ್ರೀ ಡಿ. ಎನ್. ಜೀವರಾಜ್: ಅದನ್ನು ನೂರಕ್ಕೆ ನೂರರಷ್ಟು ಮಾಡುತ್ತಾರೆ. ಅಕ್ರಮ ಸಕ್ರಮದಲ್ಲಿ ಸಾಗುವಳಿ ಚೀಟಿ ಕೊಡಬೇಕು ಎನ್ನುವುದು ಎಷ್ಟು ಸರಿನೋ ಒಂದು ವಿಷಯ ಏನೆಂದರೆ, ಬೇರೆಯದಕ್ಕೆಲ್ಲಾ adverse possession ಎನ್ನುವುದು ಇದೆ. ಇದರಲ್ಲಿ

adverse possession ನಲ್ಲಿ ಬಂದರೂ ಅದು ನಮ್ಮದೇ ಆಗುತ್ತದೆ. ಏಕೆಂದರೆ, ನಮ್ಮ ಅಜ್ಜ, ಅಪ್ಪ, ನಾವು ಹುಟ್ಟಿದ್ದು ಅಲ್ಲಿಯೇ, ನಾನು ನಿನ್ನೆನೂ ಹೇಳಿದೆ. ನಾವು ಸಾಯುವುದೆಲ್ಲಿ ಎಂದರೆ ಕೊನೆಗೆ ನಮ್ಮದೇ ಆದ ಮನೆಯಲ್ಲಿ ಸತ್ತಿದ್ದೇವೆಂದಾಗಲಿ, ಹೀಗಾಗಿ ಅದನ್ನು ಕೊಡಿ. ಸರ್ಕಾರದವರು ಅದನ್ನು ಮಾಡಿ ಕೊಡುತ್ತಾರೆ. ಈ ಮರಗಳನ್ನು ಕಾಯ್ದಿರಿಸಿ ಸಾಗುವಳಿ ಚೀಟಿ ಕೊಡುವಂಥಾದ್ದು ಹಿಂದಿನಿಂದಲೂ ನಡೆದು ಬಂದಿತ್ತು. ಯಾರೋ ಒಬ್ಬರಿಗೆ ಇದ್ದಕ್ಕಿದ್ದ ಹಾಗೆ ಅನ್ನಿಸಿಬಿಡ್ತು. ಮರ ಕಾಯ್ದಿರಿಸಿ ಸಾಗುವಳಿ ಚೀಟಿ ಕೊಡಬಹುದು ಎನ್ನುವುದು ಇದೆ ಎಂದು ಅವರು ನೋಡಲೇ ಇಲ್ಲ. ಅದನ್ನು ಮಾಡದೇ ಇರುವುದರಿಂದ ತಪ್ಪಾಗಿದೆ. ಅದನ್ನು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಮ್ಮ ಕರ್ನಾಟದ ಸರ್ಕಾರದಲ್ಲಿ ಎಂಥೆಂಥ ಕಲ್ಪನೆಯ ಯೋಜನೆಗಳು ಜಾರಿಗೆ ಬಂದಿವೆ. ಉದಾಹರಣೆಗೆ ಹೇಳುವದುದಾದರೆ, ಭಾಗ್ಯಲಕ್ಷ್ಮಿ ಬಾಂಡ್. ಮುಂಚೆ ಹೆಣ್ಣು ಮಗು ಹುಟ್ಟಿ ಬಿಟ್ಟರೆ ಅಪ್ಪನಿಗಿಂತ ಅಮ್ಮನಿಗೆ ಈ ಹುಡುಗಿ ಬೇಡಬಾಗಿತ್ತು ಎಂದು ಬೇಜಾರಾಗುತ್ತಿದ್ದರು. ಆದರೆ ಈಗ ಹೆಣ್ಣು ಮಗು ಹುಟ್ಟಿದರೆ ನಮಗೆ ಬಂದು ಹೇಳುತ್ತಾರೆ. ಯಾವಾಗಲೂ ಒಂದು ವಿಷಯ ನನ್ನ ಮನಸ್ಸಿಗೆ ಬರುತ್ತದೆ. ಅದೇನೆಂದರೆ, ಹುಟ್ಟಿನಿಂದ ಸಾವಿನವರೆಗೆ ಮನುಷ್ಯನಿಗೆ ಏನೇನು ಅವಶ್ಯಕತೆಗಳಿವೆಯೋ ಅವೆಲ್ಲವನ್ನು ನಮ್ಮ ಸರ್ಕಾರ ಕೊಟ್ಟಿದೆ. ಅಂದರೆ, ಹೆರಿಗೆ ಭತ್ಯದಿಂದ ಹಿಡಿದು ಮಡಿಲು ಕಿಟ್, ಭಾಗ್ಯಲಕ್ಷ್ಮಿ ಬಾಂಡ್ ಕೊಡುವುದಲ್ಲದೆ ಸ್ಕೂಲ್ ಮಕ್ಕಳಿಗೆ ಸೈಕಲ್ ಕೊಡುವುದರ ಜೊತೆಗೆ ರೈತರಿಗೆ ಅನೇಕ ಸವಲತ್ತುಗಳನ್ನು ನಮ್ಮ ಸರ್ಕಾರ ಕೊಡುತ್ತಿದೆ. ಮತ್ತೆ ಅಂತ್ಯ ಸಂಸ್ಕಾರಕ್ಕೂ ಕೂಡ 1 ಸಾವಿರ ರೂಪಾಯಿ ಕೊಡಲಾಗುತ್ತಿದೆ. ಆದ್ದರಿಂದ, ಮನುಷ್ಯನ ಹುಟ್ಟಿನಿಂದ ಹಿಡಿದು ಸಾವಿನವರೆಗಿನ ಎಲ್ಲಾ ಕಾರ್ಯಕ್ಕೂ ಹಣ ಕೊಟ್ಟಿರುವಂಥದ್ದು ನಮ್ಮ ಸರ್ಕಾರ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರೊಳಗೆ ಭಾಗ್ಯಲಕ್ಷ್ಮಿ ಯೋಜನೆ ಕೂಡ ಒಂದು ಕಾರ್ಯಕ್ರಮವಾಗಿದೆ. ಒಂದು ಮಗು ಹುಟ್ಟಿದರೆ ಒಂದು ಲಕ್ಷ ರೂಪಾಯಿಯನ್ನು ಭಾಗ್ಯಲಕ್ಷ್ಮಿ ಯೋಜನೆಯಿಲ್ಲಿ ಕೊಡುತ್ತಿದ್ದೇವೆ. ಇದರಿಂದ ಈಗ ಏನಾಗಿದೆ ಎಂದರೆ ಮನೆಯಲ್ಲಿ ಗಂಡು ಮಗು ಹುಟ್ಟಿದರೆ ಜನರಿಗೆ ಬೇಜಾರುವಾಗುವಂತಾಗಿದೆ. ಅಂದರೆ, ಹೆಣ್ಣು ಮಗು ಹುಟ್ಟಿದ್ದರೆ ಒಂದು ಲಕ್ಷ ರೂಪಾಯಿಯಾದರೂ ಸಿಗುತ್ತಿತ್ತು. ಈಗ ಅದು ಇಲ್ಲವಲ್ಲ ಎಂದು ಬೇಜಾರು ಪಟ್ಟುಕೊಳ್ಳುತ್ತಿದ್ದಾರೆ. ಈ ರೀತಿಯಾದ ಒಂದು ಆಲೋಚನೆಯಿಂದ ನಮ್ಮ ಸರ್ಕಾರ ಈ

ಯೋಜನೆಯನ್ನು ಜಾರಿಗೆ ತಂದಿರುವಂಥದನ್ನು ನಾವೆಲ್ಲರೂ ನೋಡುತ್ತಿದ್ದೇವೆ. ಸಂಧ್ಯಾ ಸುರಕ್ಷಾ ಯೋಜನೆ ಎಲ್ಲದಕ್ಕಿಂಥ ಬಹಳ ವಿಶೇಷವಾದಂಥ ಕಾರ್ಯಕ್ರಮವೆಂದು ನಾನು ಭಾವಿಸುತ್ತೇನೆ. ಇವತ್ತಿನ ದಿವಸ ಸರ್ಕಾರಿ ನೌಕರರಿಗೆ 60 ವರ್ಷಗಳಾದ ಮೇಲೆ ಪೆನ್ಷನ್ ಬರುತ್ತದೆ. ಅದೇ ರೀತಿಯಾಗಿ 65 ವರ್ಷಗಳವರೆಗೆ ಈ ದೇಶಕ್ಕೆ ಅನ್ನ ಹಾಕಿ ದುಡಿದಂಥ ರೈತರಿಗೆ ಮತ್ತು ಕೂಲಿ ಕಾರ್ಮಿಕರಿಗೆ ಸಂಧ್ಯಾ ಸುರಕ್ಷಾ ಯೋಜನೆಯಲ್ಲಿ ಕೊಡುತ್ತಿರುವುದು ಒಂದು ರೀತಿಯಲ್ಲಿ ಪೆನ್ಷನ್ ಎಂದು ನಾನು ಭಾವಿಸುತ್ತೇನೆ. ನಾವು ಅವರಿಗೆ ಧರ್ಮದ ಹಣವನ್ನು ಕೊಡುತ್ತಿಲ್ಲ. ಅವರ ಹಕ್ಕಿನ ಹಣವನ್ನು ಅವರಿಗೆ ಕೊಡುತ್ತಿದ್ದೇವೆ. ಅಂದರೆ, 65 ವರ್ಷ ಈ ದೇಶಕ್ಕಾಗಿ ಕೆಲಸ ಮಾಡಿರುವಂಥ ರೈತರಿಗೆ ಕೊಡುತ್ತಿರುವಂಥ ಹಣವಾಗಿದೆ. ಈ ಯೋಜನೆಯಲ್ಲಿ 400 ರೂಪಾಯಿ ಕೊಡಬೇಕೆಂದು ಮೊದಲು ಆಲೋಚನೆ ಮಾಡಿ ಇಂಥ ಒಂದು ಜನಪರ ಕಾರ್ಯಕ್ರಮವನ್ನು ಜಾರಿಗೆ ತಂದದು ನಮ್ಮ ಸರ್ಕಾರ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಯು. ಟಿ. ಖಾದರ್: ಮಾನ್ಯ ಉಪಾಧ್ಯಕ್ಷರೆ, ಈ ಯೋಜನೆ ಅಡಿಯಲ್ಲಿ ಬರುವಂಥ ಫಲಾನುಭವಿಗಳಿಗೆ ಆರೇಳು ತಿಂಗಳಿಂದ ಸರ್ಕಾರ ಹಣ ಕೊಟ್ಟಿಲ್ಲ. ಇವರುಗಳ ಮಾತುಗಳಲ್ಲಿ ಮಾತ್ರ ಇದು ಇದೆಯೇ ಹೊರತು ಜನರಿಗೆ ಮಾತ್ರ ಇದರ ಹಣ ಮುಟ್ಟುತ್ತಿಲ್ಲ. ಅಲ್ಲಿ ಕೂಗಾಡುವಂಥ ಜನರಿಗೆ ನಿಮ್ಮ ಮಾತುಗಳು ಅರ್ಥವಾಗುವುದಿಲ್ಲ. ಆರೆಂಟು ತಿಂಗಳಿಂದ ದುಡ್ಡು ಕೊಟ್ಟಿಲ್ಲ. ಆದ್ದರಿಂದ, ಮೊದಲು ಇದಕ್ಕೆ ಏನಾದರೂ ವ್ಯವಸ್ಥೆ ಮಾಡಿ, ಅನಂತರ ಇದರ ಬಗ್ಗೆ ಇಲ್ಲಿ ಮಾತನಾಡೋಣ.

ಶ್ರೀ ಡಿ. ಎನ್. ಜೀವರಾಜ್: ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಮೊನ್ನೆ ದಿವಸ ಹೇಳಿದ್ದಾರೆ. ಇದನ್ನು ತಾವೂ ಕೂಡ ಕೇಳಿದ್ದೀರೆಂದು ನಾನು ಅಂದುಕೊಳ್ಳುತ್ತೇನೆ. ಈಗ ಯಾರಿಗೆ ಹಣ ಬರುತ್ತಿದೆಯೋ ಅವರಿಗೆಲ್ಲ ಹಣ ಬಿಡುಗಡೆ ಮಾಡಿದ್ದೇವೆಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ ಅವರ ಹೇಳಿಕೆಯನ್ನೇ ನಾನು ಹೇಳುತ್ತಿದ್ದೇನೆ.

ಶ್ರೀ ಯು. ಟಿ. ಖಾದರ್: ನಮ್ಮ ಜಿಲ್ಲೆಯಲ್ಲಿ 5 ಸಾವಿರ ಫಲಾನುಭವಿಗಳಿಗೆ ನೀಡುತ್ತಿದ್ದ ಹಣವನ್ನು ರದ್ದು ಪಡಿಸಿದ್ದಾರೆ. ಒಂದು ಸಾರಿ ಕೊಡುವುದು ಏಕೆ? ಮತ್ತೊಮ್ಮೆ ಸರ್ವೆ ಮಾಡಿಸುವುದು ಏಕೆ? ಮತ್ತೆ ಅದನ್ನು ರದ್ದು ಮಾಡುವುದು ಏಕೆ? ಮತ್ತೆ ಕೊಡುತ್ತೇವೆಂದು

ಮಾತು ಕೊಡುವುದೇಕೆ? ಏಕೆ ಈ ರೀತಿಯಾದ ದ್ವಂದ್ವ ನಿಲುವನ್ನು ಅನುಸರಿಸುತ್ತೀರಿ? ಒಂದು ಸಿಸ್ಟಮ್ಯಾಟಿಕ್ ಆಗಿ ಕೊಡುವಂಥದನ್ನು ಮಾಡಿ.

ಶ್ರೀ ಡಿ. ಎನ್. ಜೀವರಾಜ್: ಮೊನ್ನೆ ದಿವಸ ನಡೆದ ಸಭೆಯಲ್ಲಿ ನಾವು ಸಹ ಹೇಳಿದ್ದೇವೆ. ಆದ್ದರಿಂದ, ಅದನ್ನು ಕೊಡುತ್ತಾರೆ ಇದರಲ್ಲಿ ಅನುಮಾನ ಬೇಡವೆಂದು ಹೇಳುವುದಕ್ಕೆ ಬಯಸುತ್ತೇನೆ. ಬಾಕಿ ಕೊಡಬೇಕಾಗಿರುವಂಥ ಹಣವೆಲ್ಲವನ್ನೂ ಸೇರಿಸಿ ಕೊಡುತ್ತಾರೆ. ಪೆನ್ಷನ್ ಎಂಬ ಒಂದು ಯೋಜನೆಯನ್ನು ನಮ್ಮ ಸರ್ಕಾರ ಮೊದಲಿಗೆ ಜಾರಿಗೆ ತಂದಿದೆ ಎಂದು ನಾನು ಹೇಳುತ್ತಿದ್ದೆ. ಹಿಂದೆ ಯಾವುದೇ ಮನೆಯಲ್ಲಿ ವಯಸ್ಸಾದವರನ್ನು ಕೇಳುತ್ತಿರಲಿಲ್ಲ. ಅಜ್ಜ ಮನೆಗೆ ಬರುತ್ತಾರೆನಂದರೆ ಮೊಮ್ಮಗ ಕೂಡ ತಿರುಗಿ ನೋಡುತ್ತಿರಲಿಲ್ಲ. ಆದರೆ, ಈಗ ಆ ರೀತಿ ಇಲ್ಲ. ಅಜ್ಜ ಬರುತ್ತಾನೆಂದರೆ ಮೊಮ್ಮಗ ತಿರುಗಿ ನೋಡುತ್ತಾನೆ. ಏಕೆಂದರೆ, ಅಜ್ಜನಿಗೆ ಬರುವ 400 ರೂಪಾಯಿಯಲ್ಲಿ ಚಾಕೊಲೇಟ್ ತರುತ್ತಾನೆಂದು ನೋಡುತ್ತಾನೆ. ಮತ್ತೆ ಅತ್ತೆ–ಸೊಸೆ ಮೊದಲು ಒಬ್ಬರನೊಬ್ಬರು ನೋಡುತ್ತಿರಲಿಲ್ಲ. ಈಗ ಅತ್ತೆ ಕೈಗೆ 400 ರೂಪಾಯಿ ಬರುತ್ತಿರುವುದರಿಂದ, ಸೊಸೆ ಸ್ತ್ರೀ ಶಕ್ತಿ ಗುಂಪಿಗೆ ದುಡ್ಡು ಕಟ್ಟಬೇಕೆಂದರೆ ಅತ್ತೆ ಕೈ ಅಲ್ಲಿ 400 ರೂಪಾಯಿಯನ್ನು ನಿಧಾನವಾಗಿ ಕೇಳಿ ಪಡೆದುಕೊಳ್ಳಬಹುದೆಂದು ಈಗ ಅತ್ತೆಯನ್ನು ಮಾನತಾಡಿಸುತ್ತಾರೆ. ಇಲ್ಲದಿದ್ದರೆ ಯಾರೂ ಮಾತನಾಡಿಸುತ್ತಿರಲಿಲ್ಲ. ಸಂಧ್ಯಾ ಸುರಕ್ಷಾ ಯೋಜನೆ ಅಡಿಯಲ್ಲಿ ಅವರಿಗೆ ಸಿಕ್ಕಿರುವ ಒಂದು ಆಸರೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದನ್ನು ಕೊಡುವಂಥ ಯೋಜನೆಯನ್ನು ನಮ್ಮ ಸರ್ಕಾರ ಮಾಡಿದೆ. ಇದೆಲ್ಲದರ ಮಧ್ಯದಲ್ಲಿ ಕೆಲವಷ್ಟು ಜನರಿಗೆ ಭಗವಂತನೇ ಕೈಕೊಟ್ಟಿದ್ದಾನೆ. ಅವರೆಲ್ಲ ವಿಕಲಚೇತನರು ಆಗಿಬಿಟ್ಟಿದ್ದಾರೆ. ನಾವು ಅಂಗವಿಕಲರೆಂದು ಹೇಳುತ್ತೇವೆ. ಆದರೆ, ಆ ಪದ ಸರಿಯಲ್ಲ, ವಿಕಲಚೇತನ ಎಂದು ಹೇಳುವ ಪದವೇ ಸರಿ ಎಂದು ಹೇಳುತ್ತೇನೆ. ವಿಕಲಚೇತನ ಎನ್ನುವಂಥದಕ್ಕೆ ಭಗವಂತನೆ ಕೈಕೊಟ್ಟುಬಿಟ್ಟ, ಅರ್ಧ ಅಂಗವಿಕಲರಾಗಿರುವವರಿಗೆ 400 ರೂಪಾಯಿ ಮತ್ತು ಬಹಳ ಅಂಗವಿಕಲರಾಗಿರುವವರಿಗೆ 1000 ರೂಪಾಯಿ ಕೊಡುವಂಥ ಯೋಜನೆಯನ್ನು ನಮ್ಮ ಕರ್ನಾಟಕ ಸರ್ಕಾರ ಜಾರಿಗೆ ತಂದಿದೆ. ವಿಧವಾ ವೇತನ ಕೂಡ ನಮ್ಮ ಸರ್ಕಾರ ಕೊಡುತ್ತಿದೆ. ಎಲ್ಲವೂ ಸರಿಯಾಗಿದೆ ಎಂಬು ನಾನು ಹೇಳುವುದಿಲ್ಲ. ಏಕೆಂದರೆ, ನಮ್ಮ ಅಧಿಕಾರಿಗಳು

ಸಹ ಅದೇ ರೀತಿಯಾಗಿ ನಡೆದುಕೊಳ್ಳುತ್ತಾರೆ. ಆದ್ದರಿಂದ, ನೀವು ಹೇಳಿರುವಂಥದಕ್ಕೆ ನಾನು ವಿರೋಧ ವ್ಯಕ್ತಪಡಿಸುತ್ತಿಲ್ಲ. ಈತನಿಗೆ ಒಬ್ಬ ಮಗನಿದ್ದಾನೆ ಎಂದು ಇದ್ದಕ್ಕಿದ್ದ ಹಾಗೆ ಅಧಿಕಾರಿಗಳು ಬರೆಯುತ್ತಾರೆ.

ಶ್ರೀ ಯು. ಟಿ. ಖಾದರ್: ನಿಮ್ಮ ಕ್ಷೇತ್ರದಲ್ಲಿಯೇ ಈ ರೀತಿಯಾಗಿ ಮೊಸವಾಗಿದೆ ಎಂದು ತಾವು ಹೇಳುತ್ತಿದ್ದೀರಿ. ನಿಮ್ಮ ಕ್ಷೇತ್ರದ ಜನರಿಗೆ ದುಡ್ಡು ಮುಟ್ಟಲ್ಲ.

ಶ್ರೀ ಡಿ. ಎನ್. ಜೀವರಾಜ್: ಎಲ್ಲವೂ ಸರಿಯಾಗಿದೆ ಎಂದು ನಾನು ಹೇಳುತ್ತಿಲ್ಲ. ಇದನ್ನು ಸರಿಪಡಿಸಬೇಕಾಗಿದೆ. ಮಾನ್ಯ ಖಾದರ್ ರವರೆ, ನೀವು ಈ ಕಡೆ ಬಂದು ಕುಳಿತರೂ ಕೂಡ ಇದೇ ರೀತಿಯಾಗಿರುತ್ತದೆ. ಅಂದರೆ, ಅಧಿಕಾರಿಗಳು ಮತ್ತು ಅವರ ಕೆಳಗಿರುವವರು ಕೂಡ ಅವರೇ ಇರುವುದರಿಂದ ಈ ರೀತಿಯಾಗುತ್ತದೆ. ಆದರೆ, ಯಾವ ಉದ್ದೇಶ ಇಟ್ಟುಕೊಂಡು ಸರ್ಕಾರ ಇದನ್ನು ಮಾಡಿದೆ ಎಂಬುದನ್ನು ತಾವು ದಯವಿಟ್ಟು ಅರ್ಥ ಮಾಡಿಕೊಳ್ಳಿ. ಇದರ ಹಿಂದಿರುವ ಉದ್ದೇಶದ ಮೇಲೆ ತೀರ್ಮಾನ ಮಾಡಬೇಕಾಗುತ್ತದೆ. ಇಂಥ ಒಳ್ಳೆಯ ಯೋಜನೆಯನ್ನು ನಮ್ಮ ಸರ್ಕಾರ ಜಾರಿಗೆ ತಂದಿದೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ರೀತಿಯಾದ ಯೋಜನೆಗಳನ್ನು ಜಾರಿಗೆ ತಂದ ಪ್ರಯುಕ್ತವೇ ಇವತ್ತಿನ ದಿವಸ ನಮ್ಮ ಕರ್ನಾಟಕ ಸರ್ಕಾರಕ್ಕೆ ಎಷ್ಟು ಪ್ರಶಸ್ತಿ ಬಂದಿದೆ ಎಂಬುದನ್ನು ಸನ್ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿರುವುದನ್ನು ತಾವು ಓದಿದ್ದೀರೆಂದು ನಾನು ತಿಳಿದುಕೊಂಡಿದ್ದೇನೆ. ಇಷ್ಟೆಲ್ಲ ಪ್ರಶಸ್ತಿಗಳು ಸುಮ್ಮನೆ ಬರುವುದಿಲ್ಲ. ಈ ಪ್ರಶಸ್ತಿಗಳನ್ನು ಕೇಂದ್ರ ಸರ್ಕಾರ ಕೊಟ್ಟಿದೆಯೇ ಹೊರತು ನಾವು ಕೊಟ್ಟಿರುವುದಲ್ಲ. ಇಲ್ಲಿ ನನ್ನ ಭಾಷಣವನ್ನೇ ಕತ್ತರಿಸುವುದಕ್ಕೆ ತಾವು ಹೊರಟಿರುವ ನೀವುಗಳು ಇನ್ನು ಪ್ರಶಸ್ತಿ ಕೊಡುತ್ತೀರಾ? ನನ್ನ ಭಾಷಣಕ್ಕೆ ಈ ರೀತಿಯಾಗಿ ಅಡ್ಡ ನಿಲ್ಲುತ್ತೀರಿ. ನಮ್ಮ ಸರ್ಕಾರ 100ಕ್ಕೆ 100 ಭಾಗ ಒಳ್ಳೆಯ ಕಾರ್ಯಕ್ರಮ ಮಾಡಿರುವ ಕಾರಣದಿಂದಲೇ ಈ ಪ್ರಶಸ್ತಿಗಳು ಕೇಂದ್ರ ಸರ್ಕಾರದಿಂದ ಬಂದಿವೆ. ಇವತ್ತಿನ ದಿವಸ ಬಿ.ಎಂ.ಟಿ.ಸಿ. ಮತ್ತು ಕೆ.ಎಸ್.ಆರ್.ಟಿ.ಸಿ. ಸಂಸ್ಥೆಗೆ ಎಷ್ಟು ಅವಾರ್ಡ್ ಬಂದಿದೆ ಎಂದು ತಮಗೆಲ್ಲ ಗೊತ್ತಿದೆ. ಹಿಂದೆ ಎಂದೂ ಕೂಡ ಬಾರದೆ ಇದ್ದಷ್ಟು ಅವಾರ್ಡ್ ಅನ್ನು ನಮ್ಮ ಸರ್ಕಾರ ಈ ಸಾರಿ ಪಡೆದುಕೊಳ್ಳುವುದಕ್ಕೆ ಸಾಧ್ಯವಾಗಿದೆ. ನಮ್ಮ ಸರ್ಕಾರ ಜಾರಿಗೆ ತಂದಿರುವಂಥ ನಾಗರೀಕ ಸೇವಾ ಹಕ್ಕು ಕಾನೂನು ಕೇವಲ

ಒಂದು ಸಣ್ಣ ಕಾನೂನು ಅಲ್ಲ. ಯಾವ ಅಧಿಕಾರಿ ಕೆಲಸ ಮಾಡುವುದಿಲ್ಲವೋ ಅಂಥವರಿಗೆ ಪೆನಾಲ್ಟಿಹಾಕಬೇಕೆಂಬ ಒಂದು ಆಲೋಚನೆ ಮಾಡಿ ಅಂಥ ಒಂದು ಮಹತ್ತರವಾದ ಕಾರ್ಯಕ್ರಮವನ್ನು ಜಾರಿಗೆ ತಂದಿದ್ದರೆ ಅದು ನಮ್ಮ ಸರ್ಕಾರ ಮಾತ್ರ ಎಂದು ಹೇಳುವುದಕ್ಕೆ ಬಯಸುತ್ತೇನೆ. ಮತ್ತೊಂದು ವಿಚಾರ ಏನೆಂದರೆ, ದೇಶದಲ್ಲಿ ಎಲ್ಲಿಯೂ ಇಲ್ಲದಷ್ಟು ಹುಲಿಗಳು ನಮ್ಮ ರಾಜ್ಯದಲ್ಲಿವೆ. ಅಂದರೆ, 300 ಕ್ಕಿಂಥ ಹೆಚ್ಚು ಹುಲಿಗಳು ನಮ್ಮ ರಾಜ್ಯದಲ್ಲಿವೆ ಎಂದು ಬಹಳ ಸಂತೋಷದಿಂದ ನಮ್ಮ ರಾಜ್ಯಪಾಲರು ಹೇಳಿದ್ದಾರೆ. ಅಂದರೆ, ನಮ್ಮ ಸರ್ಕಾರ ಹುಲಿಯನ್ನು ಕಾಯುವಂಥ ಕಾರ್ಯಕ್ರಮವನ್ನು ಸಹ ಮಾಡಿದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದರ ಜೊತೆಗೆ ಮಲೆನಾಡು ಪ್ರದೇಶಗಳ ಕಾಡಿನಲ್ಲಿ ಕೆಲವು ಸಮಸ್ಯೆಗಳಿವೆ. ಸಮಸ್ಯೆಗಳು ಇಲ್ಲವೆಂದು ನಾನು ಹೇಳುವುದಿಲ್ಲ. ಟೈಗರ್ Sanctuary ಯನ್ನು ಕರ್ನಾಟಕ ಸರ್ಕಾರ ಮಾಡುತ್ತಿದೆ ಎಂದು ಪ್ರತಿಭಟನೆ, ಚಳುವಳಿ ಮಾಡುತ್ತಿರುವುದನ್ನು ನಾನು ನೋಡುತ್ತಿದ್ದೇನೆ. Tiger Conservation Authority 2007ರಲ್ಲಿ ಹೇಳಿದ ಹಿನ್ನೆಲೆಯಲ್ಲಿಯೇ ಇದಾಗಿದೆ. ಮಾನ್ಯ ಜೈರಾಮ್ ರಮೇಶ್ ರವರು ಒಳ್ಳೆಯ ಉದ್ದೇಶ ಇಟ್ಟುಕೊಂಡೇ ಹೇಳಿರಬೇಕು. ಕರ್ನಾಟಕ ರಾಜ್ಯದಲ್ಲಿ 7 ಕಡೆ ಹುಲಿ ಯೋಜನೆಯನ್ನು ಜಾರಿಗೆ ತರುತ್ತೇವೆಂದು ಚಿಕ್ಕಮಗಳೂರಿನಲ್ಲಿ ಮೇ ತಿಂಗಳ 8ನೇ ತಾರೀಖು ಅವರು ಹೇಳಿದಂಥ ಹೇಳಿಕೆ ಮೇ 9 ತಾರೀಖಿನ ದಿವಸ ಎಲ್ಲ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಇದಕ್ಕೆ ನಮ್ಮ ಕರ್ನಾಟಕ ಸರ್ಕಾರದ ಹೊಣೆಗಾರಿಕೆ ಎಷ್ಟಿದೆಯೋ ಅದಕ್ಕಿಂಥ ಹೆಚ್ಚು ಕೇಂದ್ರ ಸರ್ಕಾರವೇ ಇದನ್ನು ಮಾಡುವಂಥದಾಗಿದೆ. ನಾನು ಇಷ್ಟೆಲ್ಲ ಹೇಳುತ್ತಿರುವಾಗ ತಾವುಗಳು ಬಹಳ ಪ್ರತಿಕ್ರಿಯೆ ಕೊಟ್ಟಿದ್ದೀರಿ. ನಾನು ಹೇಳುವುದನ್ನು ಮಾನ್ಯ ವಿರೋಧ ಪಕ್ಷದ ಮಿತ್ರರೆಲ್ಲರೂ ದಯವಿಟ್ಟು ಕೇಳಬೇಕೆಂದು ಹೇಳುತ್ತೇನೆ. ಪಿ.ಎಂ.ಜಿ.ಎಸ್.ವೈ. ಯೋಜನೆ ಅಡಿಯಲ್ಲಿ ರಾಜಸ್ತಾನ ರಾಜ್ಯಕ್ಕೆ 13--14ನೇ ಹಂತದವರಿಗೆ ದುಡ್ಡು ಕೊಟ್ಟಿದ್ದಾರೆ. ಆದರೆ, ಕರ್ನಾಟಕ ರಾಜ್ಯಕ್ಕೆ ಇನ್ನು 9ನೇ ಹಂತದ ಹಣವೇ ಬಿಡುಗಡೆಯಾಗಿಲ್ಲ. ಪಿ.ಎಂ.ಜಿ.ಎಸ್.ವೈ. ಅಡಿಯಲ್ಲಿ ಕರ್ನಾಟಕ ರಾಜ್ಯಕ್ಕೂ ಇಷ್ಟು ಹಣ ಕೊಡಿ. ಏಕೆಂದರೆ, ಈಗಾಗಲೇ ಕೊಟ್ಟಿರುವ ಹಣವನ್ನು ಕರ್ನಾಟಕ ಸರ್ಕಾರ ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿದೆ. ಆದ್ದರಿಂದ, ಪಿ.ಎಂ.ಜಿ.ಎಸ್.ವೈ. ಅಡಿಯಲ್ಲಿ ರಸ್ತೆಗಾಗಿ ಬಂದಿರುವ 9ನೇ ಹಂತಹ ಹಣ ಇನ್ನು ಬಿಡುಗಡೆಯಾಗಿಲ್ಲ. ರಾಜಸ್ತಾನಕ್ಕೆ 14ನೇ ಹಂತದ ಹಣ ಕೂಡ ಬಿಡುಗಡೆಯಾಗಿದೆ. ಈ

ರೀತಿಯಾದ ತಾರತಮ್ಯ ಕರ್ನಾಟಕ ರಾಜ್ಯಕ್ಕೆ ಮಾಡುವುದು ಬೇಡ, ಕರ್ನಾಟಕ ರಾಜ್ಯಕ್ಕೂ ಕೂಡ ಹಣ ಕೊಡಿ ಎಂದು ಕೇಳಿ. ನಾವು ಕೇಳುವುದಕ್ಕಿಂಥ ನೀವು ಕೇಳಿದರೆ ಸ್ವಲ್ಪ ಚೆನ್ನಾಗಿ ಆಗಬಹುದೆಂಬುದು ನಮ್ಮ ಅಭಿಪ್ರಾಯ. ಆದರೆ, ಇದನ್ನು ಸರ್ಕಾರ ಕೇಳುತ್ತದೆ. ಆದರೆ, ನೀವು ಪ್ರೀತಿಯಿಂದ ಮಾತನಾಡುತ್ತಿದ್ದಕ್ಕೆ ನಾನು ನಿಮ್ಮ ಕಡೆ ತಿರುಗಿಕೊಂಡು ಈ ಮಾತನ್ನು ಹೇಳಿದೆ. ಆದರೆ, ನಿಮ್ಮ ಕಡೆ ನೋಡಿ ಹೇಳುವುದು ನನ್ನ ಕರ್ತವ್ಯ ಅಲ್ಲ. ಮಾನ್ಯ ಉಪಾಧ್ಯಕ್ಷರನ್ನು ನೋಡಿಕೊಂಡು ಹೇಳಬೇಕೆಂಬುದು ನನಗೆ ಗೊತ್ತಿದೆ. ಆದರೆ, ಈ ಒತ್ತಾಯ ತಮ್ಮ ಕಡೆಯಿಂದಲೂ ಕೂಡ ಬರಲಿ ಎಂದು ಹೇಳುತ್ತಿದ್ದೇನೆ. ಹಣ ಬಂದಿಲ್ಲವೆಂಬುದು ಮಾತ್ರ ಇವರಿಗೆ ಗೊತ್ತಾಗುತ್ತದೆ. ನಮ್ಮ ರಸ್ತೆಗಳಿಗೆ ಕೊಟ್ಯಾಂತರ ರೂಪಾಯಿ ಹಣ ಬಂದಿಲ್ಲವೆಂಬುದು ಇವರು ಕೇಳುತ್ತಿಲ್ಲ.

ಶ್ರೀ ಯು. ಟಿ. ಖಾದರ್: ಕೇಂದ್ರದಿಂದ ಬಂದ ಹಣವೆಲ್ಲ ಇನ್ನು ಸಹ ಖರ್ಚು ಆಗುತ್ತಿಲ್ಲ.

ಡಾ॥ ಹೆಚ್. ಸಿ. ಮಹದೇವಪ್ಪ: ಕೇಂದ್ರ ಸರ್ಕಾರ ನೀಡುತ್ತಿರುವ ಹಣದಿಂದಲೇ ಇವತ್ತಿನ ದಿವಸ ಕರ್ನಾಟಕದಲ್ಲಿ ಪಂಚಾಯತ್ ರಾಜ್ ಆಡಳಿತಕ್ಕೆ ವ್ಯವಸ್ಥೆ ಬಹುತೇಕ ನಡೆಯುತ್ತಿದೆ.

ಶ್ರೀ ಯು. ಟಿ. ಖಾದರ್: ಕೇಂದ್ರ ಸರ್ಕಾರ ನೀಡುತ್ತಿರುವ ದುಡ್ಡಿನಿಂದಲೇ ಇವತ್ತಿನ ದಿವಸ ರಾಜ್ಯ ಸರ್ಕಾರ ಬದುಕುತ್ತಿದೆ.

ಶ್ರೀ ಡಿ. ಎನ್. ಜೀವರಾಜ್: ಮಾನ್ಯ ಉಪಾಧ್ಯಕ್ಷರೇ, ಕೇಂದ್ರ ಸರ್ಕಾರ ನಮಗೆ ಸತ್ಯವಾಗಲೂ ದುಡ್ಡು ಕೊಡಬೇಕಾಗುತ್ತದೆ. ಅವರೇನು ಸುಮ್ಮನೆ ಹಣ ಕೊಡುತ್ತಿಲ್ಲ. ನಮ್ಮ ರಾಜ್ಯದಿಂದ ತೆರಿಗೆ ಹಣ ಅಲ್ಲಿಗೆ ಹೋಗುತ್ತದೆ. ಇಲ್ಲಿಂದ ಹೋಗುವ ಹಣವನ್ನು ಅವರು ವಾಪಸ್ಸು ಕೊಡಬೇಕು. ಅವರು ಕೊಡಬೇಕಾಗಿರುವ ಹಣದಲ್ಲಿ ತಾರತಮ್ಯ ಮಾಡಬೇಡಿ ಎಂದು ನಾವು ಹೇಳುತ್ತಿದ್ದೇವೆ. ಕರ್ನಾಟಕ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿ ಇದೆ ಎಂದು ಹಣ ಕೊಡದೇ ಇರುವುದಕ್ಕೆ ಆಗುತ್ತದೆಯೇ? ತಾಲ್ಲೂಕು ಪಂಚಾಯಿತಿಗೆ ಒಂದು ಕೋಟಿ ರೂಪಾಯಿ ಕೊಡುತ್ತೇವೆಂದು ಹೇಳಿರತಕ್ಕಂಥದು ನಮ್ಮ ಸರ್ಕಾರ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೊದಲು ತಾಲ್ಲೂಕು ಪಂಚಾಯತಿಗೆ

ಹೋಗಿರುವವರಿಗೆ ಟಿ.ಎ., ಡಿ.ಎ. ಮತ್ತು ಟೀ ಕುಡಿಯುವುದಕ್ಕೂ ಹಣ ಇಲ್ಲದಂಥ ಸ್ಥಿತಿ ಇತ್ತು. ಆದರೆ, ಈಗ ತಾಲ್ಲೂಕು ಪಂಚಾಯಿತಿಗೆ ಒಂದು ಕೋಟಿ ರೂಪಾಯಿ ಕೊಟ್ಟಿದ್ದೇವೆ.

ಶ್ರೀ ಎನ್. ಸಂಪಂಗಿ: ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಕೇಂದ್ರ ಸರ್ಕಾರ ಹಣ ನೀಡಿದೆ. ಆದ್ದರಿಂದ, ಗ್ರಾಮ ಪಂಚಾಯತ್‌ನಲ್ಲಿ ಕೆಲಸ ಆಗುತ್ತಿವೆ.

ಶ್ರೀ ಡಿ. ಎನ್. ಜೀವರಾಜ್: ಕೇಂದ್ರ ಸರ್ಕಾರ ಅಂದರೆ ಅದು ಪಾಕಿಸ್ತಾನ ಎಂದು ತಿಳಿದುಕೊಂಡಿದ್ದೀರಾ? ಕೇಂದ್ರ ಸರ್ಕಾರ ಎಂದರೆ ಅದು ಕೂಡ ಈ ದೇಶಕ್ಕೆ ಸಂಬಂಧಪಟ್ಟಿದೆ. ನಾವು ಕೊಟ್ಟಿರುವ ತೆರಿಗೆ ಹಣದಲ್ಲಿಯೇ ಇಷ್ಟು ಪರ್ಸೆಂಟ್ ವಾಪಸ್ಸು ನಮ್ಮ ರಾಜ್ಯಕ್ಕೆ ಬರಬೇಕಾಗಿದೆ. ಈ ಹಣ ಸರಿಯಾಗಿ ಬಂದಿದೆಯೇ ಎಂಬುದನ್ನು ತಾವು ನೋಡಿಕೊಳ್ಳಿ. ಪಿ.ಎಂ.ಜಿ.ಎಸ್.ವೈ. ಅಡಿಯಲ್ಲಿ ದುಡ್ಡು ಬಂದರೆ, ಮಾನ್ಯ ಸಂಪಂಗಿ, ಮಾನ್ಯ ಖಾದರ್ ರವರ ಕ್ಷೇತ್ರ ಮತ್ತು ಎಲ್ಲರ ಕ್ಷೇತ್ರಗಳ ರಸ್ತೆಗಳು ಸಹ ಆಗುತ್ತವೆ, ಅಂದರೆ, ನಿಮ್ಮ ಕಡೆಯವರದು ಮತ್ತು ನಮ್ಮ ಕಡೆಯವರ ರಸ್ತೆಗಳು ಸಹ ಆಗುತ್ತವೆ.

ಶ್ರೀ ಕೆ. ಅಭಯಚಂದ್ರ: ರಾಜ್ಯ ಸರ್ಕಾರ ಏನಾದರೂ ದುಡ್ಡನ್ನು ಪ್ರಿಂಟ್ ಮಾಡುತ್ತದೆಯೇ?

ಶ್ರೀ ಡಿ. ಎನ್. ಜೀವರಾಜ್: ಹಣ ಪ್ರಿಂಟ್ ಮಾಡುವುದಕ್ಕೆ ನಮಗೆ ಪವರ್ ಕೊಟ್ಟಿದ್ದಾರೆಂದು ನಾನು ಹೇಳಿಲ್ಲ. ಈ ಕೆಲಸವನ್ನು ರಿಸರ್ವ್ ಬ್ಯಾಂಕ್ ನವರು ಮಾಡಬೇಕೆಂಬ ಪ್ರಜ್ಞೆ ನನಗೆ ಇದೆ. ಇಷ್ಟು ಪ್ರಜ್ಞೆ ಇರುವಂಥವರರನ್ನೇ ಶೃಂಗೇರಿ ಕ್ಷೇತ್ರದ ಜನ ಆಯ್ಕೆ ಮಾಡಿ ಇಲ್ಲಿಗೆ ಕಳುಹಿಸಿಕೊಟ್ಟಿದ್ದಾರೆ. ನಾವು ಪ್ರಿಂಟ್ ಮಾಡುವುದಕ್ಕೆ ಆಗುತ್ತದೆಯೇ ಎಂದು ಅವರು ಬಾಲಿಶವಾದ ಪ್ರಶ್ನೆ ಕೇಳಿದರೆ ಇದಕ್ಕೆ ಉತ್ತರ ಕೊಡುವುದು ಕಷ್ಟ. ಈ ದೇಶದ ಕಾನೂನಿನ ಪ್ರಕಾರ ಹಣ ಪ್ರಿಂಟ್ ಮಾಡುವ ಕೆಲಸವನ್ನು ರಿಸರ್ವ್‌ಬ್ಯಾಂಕ್ ಮಾಡಬೇಕಾಗಿದೆ. ನಿಮಗೂ ಸಹ ಗೊತ್ತಿರಲೆಂದು ಒಂದು ವಿಚಾರ ಹೇಳುವುದಕ್ಕೆ ಬಯಸುತ್ತೇನೆ. ಅದೇನೆಂದರೆ, ಭತ್ತ ಖರೀದಿಯಲ್ಲಿಯೂ ಕೂಡ 250 ರೂಪಾಯಿ ರೈತರಿಗೆ ಕೊಡುತ್ತೇವೆಂದು ಹೇಳಿರುವುದು ಇದ್ದರೆ ಅದು ಕರ್ನಾಟಕ ಸರ್ಕಾರ ಮಾತ್ರ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದನ್ನು ಎಲ್ಲಿಯೂ ಕೂಡ ಯಾರೂ ಹೇಳಿಲ್ಲ. ಎಷ್ಟು ಭತ್ತ ಖರೀದಿ ಮಾಡಲಾಗಿದೆ ಎಂದು ನಿಮಗೆ ಗೊತ್ತಿರಲಿ. ಮಾತನಾಡುವುದಕ್ಕೆ ಸಾಕಷ್ಟು ವಿಷಯಗಳಿವೆ. ಸುಮ್ಮನೆ ನಿಂತರೆ ಹಾಗೆಯೇ ಮಾತನಾಡಿಕೊಂಡು ಹೋಗುವಷ್ಟು

ವಿಚಾರಗಳು ಈ ಕರ್ನಾಟಕ ಸರ್ಕಾರದೊಳಗಡೆ ಇವೆ.

ಆದರೆ ಸಮಯವಾಗಿದೆ ಎಂದು ನಮ್ಮ ನಾಯಕರು ಈ ಕಡೆ ತಿರುಗಿ ಒಂದು ಸಾರಿ ನೋಡುತ್ತಿದ್ದಾರೆ. ಮಧ್ಯಾಹ್ನ ಊಟಕ್ಕೆ ಹೋಗಬೇಕಾಗಿರುವುದರಿಂದ ನಮ್ಮ ನಾಯಕರು ಪಕ್ಕದಲ್ಲಿ ಕುಳಿತುಕೊಂಡು ಕೇಳುತ್ತಿದ್ದಾರೆ, ಸಾಕು ಬಿಡು ಎಂದು ಹೇಳಿ ನೋಡಿ, ಹೇಳುತ್ತಾ ಹೋದರೆ ಕರ್ನಾಟಕ ಸರ್ಕಾರದ ಒಳಗಡೆ ಎಷ್ಟೊಂದು ಹೇಳುವುದಕ್ಕೆ ಇದೆ.

ಶ್ರೀ ಕೆ. ಅಭಯಚಂದ್ರ: ಕೇಳುವುದಕ್ಕೆ ನಿಮ್ಮ ಪಕ್ಕದಲ್ಲಿ ನಿಮ್ಮವರೇ ಯಾರೂ ಇಲ್ಲ. ಇದರಿಂದ ನಮಗೆ ನೋವಾಗುತ್ತಿದೆ.

ಶ್ರೀ ಡಿ.ಎನ್ ಜೀವರಾಜ್: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಅಭಯಚಂದ್ರರವರೆ, ಯಾರು ಕೇಳುವುದಕ್ಕೆ ಇದ್ದಾರೋ ಬಿಟ್ಟಿದ್ದಾರೋ ಗೊತ್ತಿಲ್ಲ. ನಾನು ಮೊದಲನೆಯ ಸಾರಿ ಎಂ.ಎಲ್.ಎ. ಆಗಿ ಬಂದಾಗ ಈಗ ಕುಳಿತಿರುವ ಮಾನ್ಯ ಕಿಮ್ಮನೆ ರತ್ನಾಕರ್‌ರವರ ಜಾಗ ನನ್ನದಾಗಿತ್ತು. ನಿಮಗೆ ಜಾಗ ಇಲ್ಲಿತ್ತು. ನನಗೆ ಇನ್ನೂ ಕಣ್ಣಿಗೆ ಕಟ್ಟಿದಂತಿದೆ. ನೀವು ಮತ್ತು ನಿಮ್ಮ ಮುಖ್ಯಮಂತ್ರಿ ಮಂತ್ರಿಗಳು ಇರಲಿಲ್ಲ. ಯಾರೂ ಇರಲಿಲ್ಲ. ನಮ್ಮ ನಾಯಕರಾದ ಮಾನ್ಯ ಯಡಿಯೂರಪ್ಪನವರು ಎದ್ದು ನಿಂತುಕೊಂಡು ಒಂದು ಸಲ ಕ್ಲ್ಯಾಪ್ ಕೊಟ್ಟ ಹೊಡೆತಕ್ಕೆ ನೀವು ಕೆಳಗೆ ಬಿದ್ದು ಆ ಗ್ಯಾಲರಿಯಲ್ಲಿಯೂ ಇರಲಿಲ್ಲ. ಇಲ್ಲಿಯೂ ಯಾರೂ ಇರಲಿಲ್ಲ. ಇವೆಲ್ಲವನ್ನೂ ನಾವು ಕಣ್ಣಲ್ಲಿ ಕಂಡಿದ್ದೇವೆ. ಹಾಗಾಗಿ ಅದೆಲ್ಲ ಈಗ ಬೇಡ. ಅಲ್ಲಿ ಯಾರು ಇದ್ದಾರೆ, ಇಲ್ಲಿ ಯಾರು ಇದ್ದಾರೆ, ನೀವು ಇದ್ದಾಗಲೂ ಅದೇ ಆಗಿರುವುದು, ನಾವು ಇದ್ದಾಗಲೂ ಅದೇ ಆಗಿದ್ದು ಎನ್ನುವುದು ಬೇಡ. ಶಾಸಕನಾದವನ ಕರ್ತವ್ಯ ವಿಧಾನಸಭೆಯಲ್ಲಿ 'ನಾನು ಕೂಡಬೇಕು' ಎನ್ನುವ ಕರ್ತವ್ಯವಾಗಬೇಕು, ಅವರನ್ನು ಹಿಡಿದುಕೊಂಡು ಬರುವುದು ಅಲ್ಲ. ನಿಮ್ಮ ಕಡೆ ಯಾರೂ ಇಲ್ಲ. ನಮ್ಮ ಕಡೆ ಯಾರೂ ಇಲ್ಲ. ಇದು ಎಲ್ಲಾ ಕಡೆಯೂ ಇದೆ. ಇದರ ಬಗ್ಗೆ ಚರ್ಚೆ ಬೇಡ. ಆದರೆ ಮಾನ್ಯ ರಾಜ್ಯಪಾಲರು ಎಕ್ಸ್‌ರೇ ಕಣ್ಣಿನಲ್ಲಿ ನೋಡಿದಾಗಲೂ ನಮ್ಮ ಸರ್ಕಾರದ ಇಷ್ಟು ಚೆಂದದ ಕಾರ್ಯಕ್ರಮವನ್ನು ಮಾಡಿದೆ ಎನ್ನುವಂಥ ಶಿಫಾರಸ್ಸು ಮತ್ತು ಮೆಹರ್‌ಬಾನಿಯನ್ನು ಕೊಟ್ಟು ಹೋಗಿದ್ದಾರೆ. ನಾನು ನಮ್ಮ ಹಿರಿಯರಾದ ಮಾನ್ಯ ರಾಜ್ಯಪಾಲರಿಗೆ ಅತ್ಯಂತ ಗೌರವದಿಂದ ಅವರ ಭಾಷಣಕ್ಕೆ ಈ ಸರ್ಕಾರ ಒಂದು ವಂದನೆಯನ್ನು ಮಾಡಿ ಕೊಡಬೇಕು ಎನ್ನುವಂಥದ್ದನ್ನು ಅತ್ಯಂತ ವಿನಮ್ರತೆಯಿಂದ ಸೂಚಿಸುತ್ತಿದ್ದೇನೆ. ಇನ್ನೂ ಹೇಳುವುದಕ್ಕೆ ಬಹಳಷ್ಟು ವಿಚಾರಗಳು ಇವೆ. ಆದರೆ ಬೇರೆ ಬೇರೆ ಸಂದರ್ಭಗಳಲ್ಲಿ ಮಾತನಾಡಿದ್ದೇವೆ, ಸಮಸ್ಯೆಗಳು ಇವೆ.

ಒಳ್ಳೆಯ ಕಾರ್ಯಕ್ರಮಗಳನ್ನು ಹೇಳುವುದಕ್ಕೆ ಇನ್ನೂ ನೂರಾರು ಇವೆ. ಆದರೆ ನಾನು ಮುಂಚೆಯೇ ಹೇಳಿದೆ. ನಮ್ಮ ಸರ್ಕಾರದ ಸಾಧನೆಗಳನ್ನು ಹೇಳುವುದಕ್ಕೆ ಬಹಳಷ್ಟು ದಪ್ಪವಾದ ಪುಸ್ತಕ ಬೇಕಾಗುತ್ತದೆ. ಮೂರು ಗಂಟೆ ಮಾತನಾಡುವುದಕ್ಕೆ ನನಗೆ ಸಮಯ ಬೇಕಾಗುತ್ತದೆ. ಆದರೆ ಇದೆಲ್ಲದರ ಮಧ್ಯೆದಲ್ಲಿಯೂ ಇದನ್ನು ಸಂಕ್ಷಿಪ್ತವಾಗಿ ಮಾಡಿ ಹೇಳುವಂಥ ಒಂದು ಪ್ರಯತ್ನವನ್ನು ಮಾಡಿದ್ದೇನೆ. ಒಟ್ಟಾಗಿ ಒಂದೇ ಲೈನ್‌ನಲ್ಲಿ ಹೇಳುವುದಾದರೆ "ಹುಟ್ಟಿನಿಂದ ಸಾವಿನವರೆಗೆ ಬೇಕಾಗಿರುವಂಥ ಸಕಲ ಸೌಲತ್ತುಗಳನ್ನು ಕೊಟ್ಟಂಥ ಏಕೈಕ ಕರ್ನಾಟಕ ಸರ್ಕಾರ ನಮ್ಮದು ಎಂದು ಹೇಳುತ್ತಾ ಮಾನ್ಯ ರಾಜ್ಯಪಾಲರಿಗೆ ವಂದನೆಯನ್ನು ಕೊಡಬೇಕೆಂದು ಹೇಳುತ್ತಾ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು: ಈಗ ಸದನವನ್ನು ಸೋಮವಾರ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು 1 ಗಂಟೆ 22 ನಿಮಿಷಕ್ಕೆ ಮುಕ್ತಾಯಗೊಂಡು ದಿನಾಂಕ: 6–2–2012ರ ಬೆಳಿಗ್ಗೆ: 11.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

ಅನುಬಂಧ – 1

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ವಿಧೇಯಕ, 2011

(2011ರ ವಿಧಾನ ಪರಿಷತ್ತಿನ ವಿಧೇಯಕ ಸಂಖ್ಯೆ 08)

(ವಿಧಾನ ಪರಿಷತ್ತಿನಲ್ಲಿ ಅಂಗೀಕಾರವಾದ ರೂಪದಲ್ಲಿ)

ಕರ್ನಾಟಕ ಜಾನಪದ ವಿಶ್ವವಿದ್ಯಾಲಯವನ್ನು ಸ್ಥಾಪಿಸಿ ನಿಗಮಿತಗೊಳಿಸುವುದಕ್ಕಾಗಿ ಉಪಬಂಧ ಕಲ್ಪಿಸಲು ಒಂದು ವಿಧೇಯಕ.

ಜಾನಪದ ಕಲಿಕೆಯ ಮುನ್ನಡೆಯನ್ನು ಸಾಧಿಸುವುದಕ್ಕಾಗಿ ಮತ್ತು ಸಂಶೋಧನೆಯನ್ನು ಮುಂದುವರೆಸುವುದಕ್ಕಾಗಿ ಹಾಗೂ ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಅದಕ್ಕೆಂದೇ ಅನ್ವಯವಾಗಿ ನಿರತವಾದ ಒಂದು ಏಕ ಘಟಕೀಯ ಮತ್ತು ನಿವಾಸಿ ಸ್ವರೂಪದ ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದು ಯುಕ್ತವಾದುದರಿಂದ :

ಇದು ಭಾರತ ಗಣರಾಜ್ಯದ ಅರವತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ.–